ಕನ್ನಡ ಭಾಷಾ ಬೋಧನಾಶಾಸ್ತ್ರ 23/04/24

# ಭಾಷಾ ಸ್ವಾಧೀನ

1) ಭಾಷಾ ಸ್ವಾಧೀನ - ಭಾಷಾ ಕಲಿಕೆ (ಕಲಿಕೆ - ಗ್ರಹಿಕೆ)
2) ಭಾಷಾ ಬೋಧನಾ ತತ್ವಗಳು
3) ಪ್ರಚೋದನೆ - ಪ್ರೇರಕನಾದಂತ ಕ್ರಿಯೆ
4) ಭಾಷೆ - ಕಲಿಕೆಯ ಸಾಧನ
5) ವ್ಯಾಕರಣದ ಪಾತ್ರ
6) ವೈಯಕ್ತಿಕ ತರಗತಿಯ ಕೋಣೆ -ಗಳು.
7) ಬಹುಭಾಷಾ ಸಂದರ್ಭಗಳು
8) ಪಠ್ಯಪುಸ್ತಕ.

→ ಸಂಸ್ಕೃತದ ಭಾ ಮತ್ತು ಷೆ ಎಂಬ ಎರಡು ಅಕ್ಷರಗಳಿಂದ ಭಾಷೆ ಬಂದಿದೆ.
ಭಾ ಎಂದರೆ - ಬೆಳಕು.
ಷೆ ಎಂದರೆ - ಪ್ರಕಾಶಿಸು.

* English ನ Lingua (ಲಿಂಗ್ವಾ) ಎಂಬ ಪದದಿಂದ ಭಾಷೆ ಬಂದಿದೆ ಇದರರ್ಥ - "ನಾಲಗೆಯಿಂದ ಬಂದದ್ದು".

* ಕನ್ನಡದ ಪರಿಕಲ್ಪನೆಯಲ್ಲಿ ಭಾಷೆ ಎಂದರೆ - ವಚನ, ಮಾತು, ನುಡಿ, ಸೊಲ್ (ಧ್ವನಿ).

→ ಇದೊಂದು ಮಾಧ್ಯಮ, ಸಾಧನ, ಸಂವಹನದ ಮಾರ್ಗ.

ಭಾಷೆಯ ಲಕ್ಷಣಗಳು:

1) ಸಂವಹನ
2) ಕೊಡು-ಕೊಳ್ಳುವಿಕೆ
3) ಯಾದೃಚ್ಛಿಕತೆ
4) ಚಲನಶೀಲತೆ / ಬದಲಾವಣೆ
5) ಧ್ವನಿ ಸಂಕೇತಗಳ ವ್ಯವಸ್ಥೆ, ದೃಶ್ಯ ಸಂಕೇತ, ಶ್ರವ್ಯ ಸಂಕೇತ ವ್ಯವಸ್ಥೆ
6) ಅಭಿವ್ಯಕ್ತಿಯ ಸಾಧನ
7) ಸಾಂಕೇತಿಕ ಮಾಧ್ಯಮ
→ ಭಾಷೆ ಒಂದು ವ್ಯವಸ್ಥಿತವಾದದ್ದು
8) ಇದೊಂದು ಬೋಧನಾ ಮಾಧ್ಯಮ
9) ಸೃಜನಾತ್ಮಕ ಮಾಧ್ಯಮವಾಗಿದೆ
10) ಭಾಷೆ ಒಂದು ಪ್ರಯೋಗ ಶಾಲೆಯಾಗಿದೆ
11) ಸ್ವಾಧೀನವಾಗಿ ಬೆಳೆಯುತ್ತದೆ
12) ಇದೊಂದು ಶೈಲಿ / ಅಭಿರುಚಿ ಸಾಧನವಾಗಿದೆ.

→ ಅಲ್ಲಮಪ್ರಭು
→ "ಮಾತೆಂಬುದು ಜ್ಯೋತಿರ್ಲಿಂಗ"

→ "ರಸಿಕನಾಡಿದ ಮಾತು ಶಶಿ-ರಸಾಯನ ಬಂದಂತೆ" → ಸರ್ವಜ್ಞ

→ ತಿಳಿದವರಿಂ ಪದದಲ್ಲಿ ತಿಳಿದ ಕಲ್ಪನೆಗಳ / ಭಾವನೆಗಳ ಮನದಲ್ಲಿ ಮೂಡಿಸುವ ಬಗೆಯಿಂದ - ಡಿ.ವಿ.ಜಿ.

→ ನುಡಿದರೆ ಮುತ್ತಿನ ಹಾರದಂತಿರಬೇಕು - ಬಸವಣ್ಣ

→ "ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ" ಪುಸ್ತಕ ಬರೆದವರು - D.N. ಶಂಕರಭಟ್ಟ
→ ಇವರು ನುಡಿಯ, ಸೊಲ್ ಎಂಬ ಪದಗಳನ್ನು ನೀಡಿದ್ದಾರೆ.

→ "ಮೊದಲ ಕನ್ನಡ ವ್ಯಾಕರಣ ಕೃತಿ ರಚಿಸಿದವರು - ನಾಗವರ್ಮ

→ ಕನ್ನಡ ಕೈಪಿಡಿಯ ಕರ್ತೃ - ಬಿ.ಎಂ.ಶ್ರೀ

→ ಇದು ಯಾದೃಚ್ಛಿಕ, ಧ್ವನಿಸಂಕೇತಗಳಲ್ಲಿ ಬಂದು ವ್ಯವಸ್ಥಿತ ಭಾಷೆ.
— ಬ್ಲಾಕ್ ಮತ್ತು ಟ್ರೇಗರ್.

→ ಮನೆ, ನಾಯಿ — ಆಕೃತಿಮಾ
→ ಮ್ + ಅ + ನ್ + ಎ
→ ಮ್, ಅ, ನ್, ಎ — 4 ಧ್ವನಿಮಾ

→ ಮನೆಯನ್ನು → ಬದ್ಧ ಆಕೃತಿಮಾ

→ ಭಾಷೆಯ ಮೂಲ — ಧ್ವನಿಮಾ / ಧ್ವನಿ

→ ಮನೆ + ಅನ್ನು → ಅನ್ನು (ಪ್ರತ್ಯಯ)

ಧ್ವನಿಮಾ — ಅರ್ಥ ಇಲ್ಲದಿರುವಂತಹ / ಅರ್ಥ ರಹಿತ ಶಬ್ದ ಘಟಕವಾಗಿದೆ. (Phoneme)

ಆಕೃತಿಮಾ — ಅರ್ಥ ಸಹಿತ (Morpheme)

→ ಎಲ್ಲಾ ಭಾಷೆಯ ಪದಗಳಿಗೆ ಪ್ರತ್ಯಯ ಸೇರಿದರೆ ಅದು ಬದ್ಧ ಆಕೃತಿಮಾ ಆಗುತ್ತದೆ.

ಪದಕ್ಕೆ ಪ್ರತ್ಯಯ ಸೇರಿ ರೂಪುಗೊಂಡ ಇದು ಬದ್ಧ ಆಕೃತಿಮಾ.

→ "ಮಕ್ಕಳು ಭಾಷೆಯಲ್ಲಿ ಸಹಜ ಶಕ್ತಿಯು ಅವರ ಭಾಷೆಯನ್ನು ಅವರೇ ಕಲ್ಪಿಸಿಕೊಂಡಿರುತ್ತಾರೆ"
— ಚೋಮ್ಸ್ಕಿ ನಾಂಯ್ಸ

Ex: ಮನೆಯನ್ನು, ರಾಮನ.

## ಭಾಷಾ ಸ್ವಾಧೀನ (ಭಾಷಾ ಗಳಿಕೆ)

* ಸಹಜ, ಸ್ವಾಭಾವಿಕ, ಅಪ್ರಜ್ಞಾಪೂರ್ವಕ, ಅನೌಪಚಾರಿಕ.
* ಇದು ಸ್ವಾಭಾವಿಕವಾಗಿ ನಡೆಯುವ ಕ್ರಿಯೆ.
* ಸರಳತೆ, ಸುಲಭತೆ, ಸಹಜತೆ
* ಇಲ್ಲಿ ವ್ಯಾಕರಣದ ಅಗತ್ಯತೆ ಇರುವುದಿಲ್ಲ.
* ಮಾತೃಭಾಷೆ.
* ಪ್ರಾದೇಶಿಕ ಭಾಷೆ (Local Language)
* ಮನೆ, ತಾಯಿ, ತಂದೆ, ಪರಿಸರದಿಂದ (ಸ್ವಾಭಾವಿಕ ಪರಿಸರ).
* ನೈಸರ್ಗಿಕತೆ.

## ಭಾಷಾ ಕಲಿಕೆ

* ಇದು ಪ್ರಯತ್ನಪೂರ್ವಕ ಕಲಿಕೆ.
* ವ್ಯವಸ್ಥಿತ, ಕ್ರಮಬದ್ಧ
* ವ್ಯಾಕರಣ, ನಿಯಮ, ಪ್ರಯತ್ನ ಅಗತ್ಯ.
* ಔಪಚಾರಿಕ, ಪ್ರಜ್ಞಾಪೂರ್ವಕ ಕ್ರಿಯೆಯಾಗಿದೆ.
* ಇದು ಉದ್ದೇಶಿತ ಕ್ರಿಯೆ.
* ದ್ವಿತೀಯ ಭಾಷೆ, ತೃತೀಯ ಭಾಷೆ ಇತರೆ ಭಾಷೆ.
* ಅರ್ಥ ಬದ್ಧ ಪ್ರಯತ್ನ + ಉದ್ದೇಶಿತ ಕಲಿಕಾ ಪರಿಸರ / ಅಗತ್ಯ ಕಲಿಕಾ ಪರಿಸರ
* ಔಪಚಾರಿಕ / ಅನೌಪಚಾರಿಕ
(ಶಾಲೆ) (ಶಾಲಾ ಕಲಿಕೆ / ಮನೆ, ಸಮಾಜ)
* ಅರ್ಥಪೂರ್ಣತೆ

→ ಹೊಸ ತ್ರಿಂತತ್ತ್ವ, ತ್ರಿಭಾಷಾ
ಅಪ್ಪಾಜಿ ಇಲ್ಲದೆ ಭಾಷೆ ಕಲಿಕೆಯು

24/04/24

ಕನ್ನಡ ಭಾಷಾ ಸಾಮರ್ಥ್ಯ ಪರೀಕ್ಷೆ / ವ್ಯಾಕರಣ

DATE: PAGE:

-ಡಿರೆ ಅಡನ್ನು - ಭಾಷಾ ಸ್ವಾಮ್ಯತೆ
ಬನ್ನಿಬೆರು.

→ ಭಾಷಾ ಕಲಿಕೆಗೆ ಅವಶ್ಯಕವಾದವು
ಇವು
→ ಸಹಜವಾದ ವಾತಾವರಣ
→ ಅಗತ್ಯವಾದ ತರಬೇತಿ, ಅಭ್ಯಾಸ
ಒದಗಿಸುವುದು
→ ಶುದ್ಧ / ಅರ್ಥಬದ್ಧ ಭಾಷಾ
ಕಲಿಕೆ ನೆರವೇರಿಸುವುದು.

→ ಶಿಕ್ಷಕರು ವಿದ್ಯಾರ್ಥಿಗಳಿಗೆ
ಭಾಷಾ ಕಲಿಕೆ ನೀಡುವ ಪದ್ಧತಿ
→ ಸಹಜವಾದ ವಾತಾವರಣ
ಒದಗಿಸುವುದು.

→ ಭಾಷೆಯ ಲಕ್ಷಣಗಳನ್ನು ತಿಳಿಸಿ
ಅಂಶ
a) ಧ್ವನ್ಯಾತ್ಮಕತೆ
b) ಉತ್ಪಾದಕತೆ
c) ಅನುವಂಶೀಯತೆ / ಸ್ವೇಚ್ಛತ್ವ
d) ವೈಯಕ್ತಿಕತೆ
e) ಶ್ರವ್ಯತೆಯುಳ್ಳ

→ c) ಅನುವಂಶೀಯತೆ / ಸ್ವೇಚ್ಛತ್ವ /
ವೈಯಕ್ತಿಕತೆ

I ಪದಜ್ಞಾನ -20m
1. ಸಮಾನಾರ್ಥಕ ಪದ -5m
2. ವಿರುದ್ಧಾರ್ಥಕ ಪದ -5m
3. ಗಾದೆಮಾತು ಪೂರ್ಣ -5m
4. ನುಡಿಗಟ್ಟು -5m

20m.

II. ವ್ಯಾಕರಣ -30m+25 =55 m.
1. ವರ್ಣಮಾಲೆ
2. ಸಂಧಿ ಪ್ರಕರಣ
3. ನಾಮಪದ 4. ವಿಶೇಷಣ
5. ವಿಭಕ್ತಿಪ್ರತ್ಯಯ.
6. ಸರ್ವನಾಮ.
7. ಧಾತು
8. ಕ್ರಿಯಾಪದ
9. ತದ್ಧಿತಾಂತ
10. ಕೃದಂತ
11. ಅವ್ಯಯಗಳು.
12. ದ್ವಿರುಕ್ತಿ / ಜೋಡುನುಡಿ / ಅನುಕರಣಾವ್ಯಯ
13. ತತ್ಸಮ-ತದ್ಭವ
14. ಲೇಖನ ಚಿಹ್ನೆ
15. ಅನ್ಯದೇಶ್ಯ ಪದ
16. ಸ್ವಂತವಾಕ್ಯ
17. ವಚನ.
18. ಸಮಾಸ

III ಕನ್ನಡ ಭಾಷಾ ಪತ್ರಿಕೆ: -50m
1. ಗದ್ಯಭಾಗ (1,2,3,4) -20 m
2. ಪದ್ಯಭಾಗ -05m
ಉತ್ತರಗಳ 8/10 ವಾಕ್ಯ
3. ಗಾದೆಮಾತು ವಿಸ್ತರಣೆ -05m
4. ಪ್ರಬಂಧ -05m
5. ಪದ್ಯದ ಸಾರಾಂಶ -05m
6. ಚಿತ್ರ ಬರಹ -05m
7. ಪತ್ರ ಲೇಖನ -05m

# ಕನ್ನಡ ಭಾಷಾ ಬೋಧನಾಶಾಸ್ತ್ರ

29/04/24

* ಭಾಷೆಯ ವ್ಯಾಖ್ಯೆಗಳು — 2 / ಬ್ಲಾಕ್ & ಟ್ರೇಗರ್, ಸ್ಟರ್ಟಿವಾಂಟ್
* ಭಾಷೆಯ ಬಗೆಗಿನ ಸಿದ್ಧಾಂತಗಳು — 4 / F.D ಸಸ್ಯೂರ್ & ಎಡ್ವರ್ಡ್ ಸಪೀರ್
* ಭಾಷೆಯ ಸ್ವರೂಪ ಲಕ್ಷಣಗಳು. — 2 / ಪ್ಲೇಟೋ, ಸ್ವೀಟ್ / ಅರಿಸ್ಟಾಟಲ್

ಬ್ಲಾಕ್ & ಟ್ರೇಗರ್ — ಸಾಮಾಜಿಕ ಸಂವಹನದ ಯಾದೃಚ್ಛಿಕ ಧ್ವನಿಸಂಕೇತ
ಸ್ಟರ್ಟಿವಾಂಟ್ — ಯಾದೃಚ್ಛಿಕ ಧ್ವನಿಸಂಕೇತ
F.D ಸಸ್ಯೂರ್ — ಅಭಿವ್ಯಕ್ತಿಯ ಮಾಧ್ಯಮವೇ ಭಾಷೆ / ಅಭಿವ್ಯಕ್ತಿ
ಎಡ್ವರ್ಡ್ ಸಪೀರ್ — ಅಭಿಪ್ರಾಯಗಳ ವ್ಯಕ್ತಪಡಿಸುವಿಕೆ
ಪ್ಲೇಟೋ — ಆಂತರಿಕ ಅಭಿವ್ಯಕ್ತಿ
ಸ್ವೀಟ್ — ಭಾವ / ವಿಚಾರ
ಅರಿಸ್ಟಾಟಲ್ ಮತ್ತು — ಶಬ್ದ ಸಂಕೇತ ಜೋಡಣೆ ಭಾಷೆ
ಹಾಕೆಟ್ — ಆಕಸ್ಮಿಕ
F.D. ಬ್ರಿಡ್ — ಚಿಹ್ನೆ, ಶಬ್ದ, ಅರ್ಥ
ಗಾಂಧೀಜಿ — ಒಬ್ಬರನ್ನೊಬ್ಬರು ಅರಿಯಲು ಶಕ್ತಿ
\ ಯಾವ ಭಾಷೆಯಲ್ಲಿ ನಾವು ಶಿಕ್ಷಣವು ಆರಂಭ ಪ್ರಾರಂಭಿಸುತ್ತೇವೆ ಅದೇ ಶ್ರೇಷ್ಠ ಭಾಷೆ.

For More Info Visit
knclingarajuedu.com

① "ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹರಿಸುವುದಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ".

– ಬ್ಲಾಕ್ & ಟ್ರೇಗರ್

② ಸ್ಟರ್ಟ್‌ವಾಂಟ್ :→ "ವ್ಯಕ್ತಿಗಳು ಬಳಸುವ ಧ್ವನಿಸಂಕೇತಗಳೇ ಭಾಷೆ / ಧ್ವನಿಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ"

③ F.D. ಸಸ್ಯೂರ್ :→ "ಮನುಷ್ಯನು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಧ್ವನಿಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ"

④ ಆಕ್ಸ್‌ಫರ್ಡ್ ನಿಘಂಟು :→ "ಮನುಷ್ಯನ ಯೋಚನೆಗಳನ್ನು ಅಭಿವ್ಯಕ್ತಿಸುವ ಸಲುವಾಗಿ ಇರುವ ಒಂದು ಶಬ್ದಸಂಯೋಜನಾ ಮಾಧ್ಯಮವೇ ಭಾಷೆ".

⑤ ವಿಟ್‌ಗನ್‌ಸ್ಟೀನ್ :→ "ಭಾಷೆಯೆಂಬುದು ಅಭಿಪ್ರಾಯಗಳ ಅಭಿವ್ಯಕ್ತಿಯ ಒಂದು ಮಾಧ್ಯಮವಲ್ಲ, ಅದೊಂದು ಆಲೋಚನಾ ಪ್ರಕ್ರಿಯೆ".

⑥ ಪ್ಲೇಟೋ :→ "ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಿಪಡಿಸುವ ಸಾಧನವೇ ಭಾಷೆ".

⑦ ವೆಸ್ಟರ್ / ವೆಬ್‌ಸ್ಟರ್ :→ "ಚಿತ್ರಗಳಿಂದ & ಚಿಹ್ನೆಗಳಿಂದ ಸೂಚಿಸುವ ಭಾವನೆ ಅನುಭವಗಳ ಅಭಿವ್ಯಕ್ತಿಯೇ ಭಾಷೆ"

⑧ ಸ್ವೀಟ್ :→ "ಒಂದು ಚಿತ್ರಣವನ್ನು ವ್ಯಕ್ತಪಡಿಸಲು ಮಾಡುವ ಉಚ್ಚರಿಸುವಾಗಿನ ಧ್ವನಿ ಉಚ್ಚಾರಣೆಯೇ ಭಾಷೆ".

⑨ ಎಡ್ವರ್ಡ್ ಸಫೀರ್ :→ "ಕೇವಲ ಭಾವ ಭಾವನೆಗಳನ್ನು, ಆಲೋಚನೆಗಳನ್ನು, ಬಯಕೆಗಳನ್ನು ಸ್ವಯಂಕೃತ ಧ್ವನಿ ಸಂಕೇತಗಳಿಂದ ಮನುಷ್ಯರು ಮಾತ್ರ ಬಳಸುವ ಅಸಹಜ ವಿಧಾನವೇ ಭಾಷೆ".

⑩ F.T. ವುಡ್ :→ "ಭಾಷೆ ಪ್ರಾಥಮಿಕವಾಗಿ ಮಾತು, ಬರಹ, ಸಂಕೇತ ಯಾವ ರೂಪದಲ್ಲೂ ಮೂಡಿ ಬಂದಿದೆ".

⑪ ಮಹಾತ್ಮ ಗಾಂಧೀಜಿ :→ "ಶಿಸ್ತುಬದ್ಧವಾದ ಬರವಣಿಗೆ ಕಲಿಯುವ ಮುಂಚೆ ಚಿತ್ರಗಳನ್ನು ಬರೆಯುವುದು ಕಲಿಯಿರಿ"

ಮಹಾತ್ಮ ಗಾಂಧೀಜಿ

- "ಮಕ್ಕಳು ಶಿಕ್ಷಣವನ್ನು ಮಾತೃಭಾಷೆಯ ಮೂಲಕ ಪಡೆಯದೇ ಇದ್ದರೆ ತಮ್ಮ ಪ್ರತಿಭೆಯನ್ನು ತಾವೇ ಹಾಳುಮಾಡಿಕೊಂಡಂತೆ"

(12) ಭಟ್ಟಾಕಳಂಕ :- "ಸಂಕೇತಗಳ ಸಮುದಾಯವೇ ಭಾಷೆ".
"ಭಾಷೆ ಧ್ವನಿಮೂಲವಾದುದು".

(13) ಆಷ್ಟರ್ :- "ಅನುಕರಣಮೂಲವೇ ಭಾಷೆ"

(14) ನಾಯರ್ :- "ಶ್ರಮ ಪರಿಹಾರವೇ ಭಾಷೆ".

(15) ವೆಂಡ್ರೆ :- "ಸಂಜ್ಞೆಗಳ ಅಭಿವ್ಯಕ್ತಿಯೇ ಭಾಷೆ".

(16) ಕಿಲ್ಪರ್ ಕೌಚ್ :- "ಪದಗಳೆಂಬ ಬಾಣಗಳ ಮೂಲಕ ಮನುಷ್ಯನ ಆಲೋಚನೆಗಳನ್ನು ಬಹಿರಂಗ ಮಾಡಿಕೊಳ್ಳಲು ಸಾಧ್ಯವಾಗುವ ಸಾಧನವೇ ಭಾಷೆ".

ವ್ಯಾಕರಣ ಅಂಗಗಳು :- ಪದ - ಅರ್ಥ - ಚಿತ್ತ - ಮೋಕ್ಷ
- ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಉಲ್ಲೇಖ.

(1) ನಾಭಿಮೂಲದೊಳ್, ಕಹಳೆಯಂತೆ ಪೊಂಗಿದಳ್,
ಶಬ್ದ ಪ್ರತೀ ಜನಮಯಿಸಿಗುಂ,
ಶ್ರೋತ್ರಪಥದ ಪೊಕ್ಕಿರ್ಗುಂ.
→ ಕೇಶಿರಾಜ

(2) ಪದನರಿದು ನುಡಿಯಲುಂ, ನುಡಿದುದನು
ಅರಿಯಲುಂ ಆರ್ಪರಾ ನಾಡವರ್ಗಳ್
'ಚದುರರ್ ನಿಜದಿಂ' ಕುರಿತೋದದೆಯುಂ
ಕಾವ್ಯ ಪ್ರಯೋಗ ಪರಿಣತ ಮತಿಗಳ್
- ಶ್ರೀವಿಜಯನ ಕವಿರಾಜ ಮಾರ್ಗ ಕೃತಿಯಾಗಿದೆ.
ಇವನು ರಾಷ್ಟ್ರಕೂಟರ ದೊರೆ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದ.

ಅರ್ಥ :- ಔಪಚಾರಿಕವಾಗಿ ಶಿಕ್ಷಣ ಪಡೆಯದೇ ಇದ್ದರೂ ಕಾವ್ಯವನ್ನು ರಚಿಸುವ ಪರಿಣತರು ಈ ನಾಡಿನ ಜನರಾಗಿದ್ದಾರೆ

* ಭಾಷೆ ವ್ಯುತ್ಪತ್ತಿಯು ಬರಡು ಕೊರಡಲ್ಲ
ವಾಕ್ಯಕ್ಕಂ ಪ್ರಕರಣಂ.

DATE: PAGE:

ವಾಕ್ಯಕ್ಕಂ ಆಧಾರಂ
ಪ್ರಕರಣಂ ವಿಸ್ತಾರಂ.
— ಕೇಶಿರಾಜನ ಶಬ್ದಮಣಿ ದರ್ಪಣ

* ಅಕ್ಷರದಿಂ ಪದಸಮುದಾಯಂ ವಾಕ್ಯಂ
ಶಬ್ದಾಕ್ಷರಕ್ಕೆ ಸಾಮರ್ಥ್ಯಂ
→ ಕೇಶಿರಾಜನ ಶಬ್ದಮಣಿ ದರ್ಪಣ

* ಅನಾದಿಯಾದುದು ಶಬ್ದಬ್ರಹ್ಮ — ಅಲ್ಲಮ ಪ್ರಭು

* ವಿಶಾಲವಾದ ನೆಲದ
ಸಂಸಾರದೊಡ್ಡಿನ್ಯ (ಜಗತ್ತು) ಬೆಳಗಿದ್ದರೆ
ಇದೇ ಭಾಷೆಯಿಂದಲೇ ತಿಳಿದುಕೊಳ್ಳಬೇಕು → ದಂಡಿಯ ಕಾವ್ಯದರ್ಶ

⇒ ಶ್ರೀವಿಜಯನ ಕವಿರಾಜಮಾರ್ಗವು ದಂಡಿಯ ಕಾವ್ಯದರ್ಶನದ
ಮೇಲಾಧಾರಿತ

ಭಾಷೆಯ ಉಗಮದ ಸಿದ್ಧಾಂತಗಳು:

1) ಅನುಕರಣಾ ಸಿದ್ಧಾಂತ:
ಪ್ರತಿಪಾದಕ: ಹರ್ಡರ್
ಪರಿಕಲ್ಪನೆ: ಪ್ರಾಣಿ, ಪಕ್ಷಿ, ಪ್ರಕೃತಿ, ವಸ್ತುಗಳ ಧ್ವನಿಯ ಅನುಕರಣೆ
-ಯ ಸಿದ್ಧಾಂತವಾಗಿದೆ.
ವಿರೋಧಿಸಿದವರು: ಮ್ಯಾಕ್ಸ್ ಮುಲ್ಲರ್
→ ಇವರು ಇದನ್ನು "ಬೌ ವೌ" ಸಿದ್ಧಾಂತ ಎಂದರು

2) ಭಾವಾತಿರೇಕ ಸಿದ್ಧಾಂತ:

ಪ್ರತಿಪಾದಕ:- ಕಾಂಡಿಲಾಕ
ಪರಿಕಲ್ಪನೆ:- ಆಶ್ಚರ್ಯ, ದುಃಖ, ಸಂತೋಷದ ಭಾವಾವೇಶವಾದಾಗ
ಹೊರಟ ಧ್ವನಿಗಳು ಭಾಷೆಯ ಮೂಲ
ವಿರೋಧಿಸಿದವರು:- "ಮ್ಯಾಕ್ಸ್ ಮುಲ್ಲರ್"
→ ಇವರು ಇದನ್ನು "ಪೂಹ್ ಪೂಹ್ ಸಿದ್ಧಾಂತ" ಎಂದು
ಕರೆದರು.

3) ಶ್ರಮ ಪರಿಹಾರ ತತ್ವ:

ಪ್ರತಿಪಾದಕ: ನಾಂಯರಿ

DATE: PAGE:

ಪರಿಕಲ್ಪನೆ: ಆದಿಮಾನವರು ಶ್ರಮದಾಯಕ ಕೆಲಸ ಮಾಡಿ ನಿಟ್ಟುಸಿರು ಹೊರ ಬಂದದ್ದೇ ಶ್ರಮ ಪರಿಹಾರ ತತ್ವ.

ಅಥವಾ

ಶ್ರಮ ಪರಿಹಾರಕ್ಕಾಗಿ ಹೊರಡಿಸಿದ ನಿಟ್ಟುಸಿರಿನಿಂದ ಹುಟ್ಟಿದ್ದೇ ಭಾಷೆ.

ಪರಿಹಾಸಿಸಿದವರು: ಸ್ಪಾರ್ಟ್ರಕ.

→ ಇದನ್ನು "ಯೋ. ಹೀ. ಹೋ ಸಿದ್ಧಾಂತ" ಎನ್ನುವರು

4) ಸಂಜ್ಞಾ ಭಾಷಾ ವಾದ:

ಪ್ರತಿಪಾದಕ: ವೂಂಟ್

ಪರಿಕಲ್ಪನೆ: ವ್ಯಕ್ತಿಯ ಚಿತ್ತವೃತ್ತಿ ಆತನ ಬಾಹ್ಯ ಸಂಜ್ಞೆಗಳ ಮೂಲಕ ವ್ಯಕ್ತವಾಗುತ್ತದೆ. ಇದು ಭಾಷೆಗೆ ಮೂಲ ಎಂಬುದು / ಭಾಷೆಗೆ ಮೊದಲು ಸಂಜ್ಞೆ ಎಂಬುದು

5) ನಾದ ತತ್ವ:

ಪರಿಕಲ್ಪನೆ: ವಸ್ತುಗಳ ಕಂಪನದಿಂದ ಹೊರಡುವ ಶಬ್ದವೇ ನಾದತತ್ವ. ಇದು ಸ್ವಾಭಾವಿಕ ಕ್ರಿಯೆ ಅ ಶಬ್ದನಾದಗಳಿಗೆ ಪ್ರತಿಕ್ರಿಯೆ ತೋರಿಸಲು ಮೂಡಿದ ಪ್ರಯತ್ನವೇ ಭಾಷೆ.

→ ಇದನ್ನು "ಡಿಂಗ್ ಡಾಂಗ್ ತತ್ವ" ಎನ್ನುವರು.

6) ತೊದಲ್ನುಡಿ ವಾದ:

ಪರಿಕಲ್ಪನೆ: ಮಗು ನಾಲ್ಕಾರು ತಿಂಗಳುಗಳ ನಂತರ ಕೇಳುವ, ನೋಡುವ ಕ್ರಿಯೆಗಳ ಮೂಲಕ ತೊದಲು ನುಡಿಯುತ್ತದೆ. ಇದೇ ತೊದಲುನುಡಿ ವಾದ.

7) ವಂಶವೃಕ್ಷ ಸಿದ್ಧಾಂತ:

ಪರಿಕಲ್ಪನೆ: ಆದಂ & ಈವ್ ರಿಂದ ಜಗತ್ತು ಸೃಷ್ಟಿಯಾಯಿತು ಎಂಬ ನಂಬಿಕೆಯಿದೆ ಹೀಗೆ ಬಂದ ಮೂಲದಿಂದ ಭಾಷೆ ಹುಟ್ಟಿ -ಬೆಳೆದು ಬಂದು ಗುರುತಿಸಿದ ವಾದವೇ ವಂಶವೃಕ್ಷ ಸಿದ್ಧಾಂತ.

8) ದೈವಮೂಲ ಸಿದ್ಧಾಂತ:

ಪ್ರತಿಪಾದಕ: ಭಟ್ಟಾಕಳಂಕ

ಪರಿಕಲ್ಪನೆ: ಭಾಷೆ ಭಗವಂತನ ಸೃಷ್ಟಿ ಆದ್ದರಿಂದ ಭಾರತೀಯರು ಪರಿಕಲ್ಪನೆಯಲ್ಲಿ "ವಾಗ್ದೇವಿ" ಎಂದು ಕರೆದಿದ್ದಾರೆ.

→ ಆಧುನಿಕರು ಇದನ್ನು ಆರೋಪಿಸಿದರು.

9) ತರಂಗ ಸಿದ್ಧಾಂತ:

DATE: PAGE:

ಪರಿಕಲ್ಪನೆ: ಒಂದೇ ಭಾಷೆಯಿಂದ ಇಂದಿನ ಎಲ್ಲಾ ಭಾಷೆಗಳು ಹುಟ್ಟಿದ ನಂತರ ಬೇರ್ಪಟ್ಟಿರುವ ಬಗ್ಗೆ ತಿಳಿಸುವುದೇ ತರಂಗ ಸಿದ್ಧಾಂತ. ಇದು ವಂಶವೃಕ್ಷ ಹೋಲುತ್ತದೆ.

Ex: ಕೊಳದ ನೀರಿನಲ್ಲಿ ಕಲ್ಲು ಎಸೆದಾಗ ನಿರಂತರ ವೃತ್ತಾಕಾರ ಅಲೆಗಳು/ ತರಂಗಗಳು ಏಳುವಂತೆ ಒಂದು ಭಾಷೆಯಿಂದ ಹಲವು ಭಾಷೆಗಳು ಹುಟ್ಟುವಿಕೆ ಉಂಟಾಗಿದೆ.

10) ಸಂಪರ್ಕ ಸಿದ್ಧಾಂತ:

ಪರಿಕಲ್ಪನೆ: ಪ್ರಾಚೀನಕಾಲದ ಭಾಷೆ ಕೇವಲ ಸಂಕೇತದ ರೂಪದಲ್ಲಿ (ಸನ್ನೆ ರೂಪ) ಪ್ರಾರಂಭವಾಗಿ ನಂತರ ಪದಗಳು ಅಕ್ಷರಗಳು ಜೊತೆಗೆ ಶಬ್ದಾರ್ಥಗಳು ಬೆಳೆದುಬಂದಿವೆ.

Ex: ಬಾಯಾರಿಕೆಗೆ ಲೋಟ ತೋರಿಸುವುದು, ಕೈಕೆ ಹಾಕುವುದು.

ಭಾಷೆಯ ಸ್ವರೂಪ & ಲಕ್ಷಣಗಳು 20/04/24

→ ಭಾಷೆಯು ಧ್ವನಿ ಸಂಕೇತವಾಗಿದೆ.
→ ಭಾಷೆಯು ಒಂದು ವ್ಯವಸ್ಥೆಯಾಗಿದೆ.
→ ಭಾಷೆಯು ಯಾದೃಚ್ಛಿಕ ಧ್ವನಿ ಸಂಕೇತವಾಗಿದೆ.
→ ಭಾಷೆಯು ಸಂಕೇತಗಳ ವ್ಯವಸ್ಥೆಯಾಗಿದೆ.
  i) ದೃಶ್ಯ ಸಂಕೇತ - ಕಣ್ಣಿಗೆ ಕಾಣುವ
  ii) ಶ್ರವ್ಯ ಸಂಕೇತ - ಕೇಳುವ ಸಂಕೇತ
  iii) ಸ್ಪರ್ಶ ಸಂಕೇತ - ಸ್ಪರ್ಶಾನುಭವ/ ಚರ್ಮೇಂದ್ರಿಯ ಸಂಕೇತ
→ ಇದು ಸಂವಹನ ಕಲೆ (ಜೀವನ ಕಲೆ)ಯಾಗಿದೆ
→ ಇದು ಉತ್ಪಾದಕ ಗುಣ ಹೊಂದಿದೆ
→ ಸ್ಥಿತ್ಯಂತರ ಗುಣ ಹೊಂದಿದೆ → i) ಅಂತರ್ವೈಯಕ್ತಿಕ ಸ್ಥಿತ್ಯಂತರ 2) ಭಾಷಾಂತರ ಸ್ಥಿ
→ ಇದು ದ್ವಿಅರ್ಥ/ ಬಹುಅರ್ಥದಿಂದ ಕೂಡಿದೆ.
→ ಇದೊಂದು ಸಾಮಾಜಿಕ ಸಂಪರ್ಕ ಸಾಧನ.
→ ಇದು ಅನುಕರಣೆ ಮೂಲಕ ಹುಟ್ಟು, ಅಭ್ಯಾಸ ಮಾಡುವುದರಿಂದ ವೃದ್ಧಿ
→ ಇದು ಪ್ರಕೃತಿದತ್ತವಲ್ಲ
→ ಇದು ಅನುವಂಶಿಕವಾಗಿ ಬರುವುದಿಲ್ಲ
→ ಇದು ಬೇರೆ ಕಲಿಯುತ್ತಿಲ್ಲ
→ ಸ್ಥಿರತೆ ಇದರ ಲಕ್ಷಣವಲ್ಲ
→ ಇದು ಸಾಮಾಜಿಕ ಅನುಕರಣೆಯ ಫಲ.

→ ಮಾನವ ಭಾಷೆ ಪ್ರಾಣಿ ಭಾಷೆಗಿಂತ ಭಿನ್ನ
→ ಭಾಷೆಯು ಯಾರ ಸ್ವಂತ ಆಸ್ತಿಯಲ್ಲ.
→ ಭಾಷೆ ತನ್ನದೇ ಆದ ಇತಿಹಾಸ ಹೊಂದಿರುತ್ತದೆ.
→ ತನ್ನದೇ ಆದ ಭೌಗೋಳಿಕ ಎಲ್ಲೆಯನ್ನು ಹೊಂದಿರುತ್ತದೆ.
→ ಭಾಷೆಯೆಂಬುದು ಬಿಡದ ಧ್ವನಿ ಪ್ರಸಂಗವಾಗಿದೆ
→ ಭಾಷೆ ಸಂಪರ್ಕದಿಂದ ಹರಡುತ್ತಾ ಕಡೆಗೆ ಸಾಗುತ್ತದೆ
→ ಇದು ಪ್ರಯತ್ನ, ಅನುಭವ, ಅಭ್ಯಾಸಗಳಿಂದ ಬೆಳೆದು ಬರುತ್ತದೆ.
→ ಇದು ಮಾನವರಿಗಿರುವ ಅಂತಃಶಕ್ತಿ, ಹಿಂಬಾಲಿಸುವ ಸದಾ ಚೈತನ್ಯ-ಶಾಲಿಯಾದ ಪ್ರವೃತ್ತಿ ಬೆಳೆಯುವ ಬೌದ್ಧಿಕ ಶಕ್ತಿಯಿಂದ ಇದಕ್ಕೆ ಅಸ್ತಿತ್ವ.
→ ಭಾಷೆ ಪ್ರವಹಿಸಿ & ಅರ್ಥ ವಿಸ್ತಾರವಾಗುತ್ತದೆ
→ ಭಾಷೆಯು ಭಾವನೆ ರೂಪಕ / ಭಾವಸೂಚಕ
→ ಇದು ಸಂಸ್ಕೃತಿಯ ವಾಹಕ.
→ ಭಾಷೆಯೊಂದು ಮಾಧ್ಯಮ — ಸಂವಹನ / ಸಾಂಕೇತಿಕ / ಬೋಧನಾ ಮಾಧ್ಯಮ / ವ್ಯವಹಾರ / ಆಡಳಿತ ಭಾಷೆ ಮಾಧ್ಯಮ
→ ಭಾಷೆ ಮನುಷ್ಯನ ಮಾತೃಭಾಷೆ / ಪ್ರಾದೇಶಿಕ ಭಾಷೆ / ಅನ್ಯಭಾಷೆಗಳಾಗಿ ಅಭ್ಯಾಸಿಸಬಹುದು.
→ ಭಾಷೆಗೆ ತನ್ನದೇ ಆದ ಅಂತಿಮ ಸ್ವರೂಪವಿಲ್ಲ.

⇝ ಯಾದೃಚ್ಛಿಕ ಎಂದರೆ ಇಷ್ಟವನ್ನು ಅವಲಂಬಿಸಿದ ಎಂದರ್ಥ / ಸ್ವತಂತ್ರ ಎಂದರ್ಥ.

→ ಭಾಷೆಯೊಂದು ಸಹಜ ಪ್ರಕ್ರಿಯೆ.
→ ಭಾಷೆಗೆ ನಿಯಮಗಳಿವೆ (ನಿಯಮಿತ)
→ ಮಾತೃಭಾಷಾ ಕಲಿಕೆಯಿಂದ ದ್ವಿತೀಯ ಭಾಷಾ ಕಲಿಕೆ ಸುಲಭ. ಅತಿ ಹೆಚ್ಚು ಕಲಿಕೆಯಿಂದ ದ್ವಿತೀಯ ಭಾಷಾ ಕಲಿಕೆಗೆ ಸಹಜ ವಾತಾವರಣ ಲಭಿಸುವುದಿಲ್ಲ.

→ ಸಿದ್ಧತಾ ತತ್ವ, ಅನುಕರಣೆ, ಅಭ್ಯಾಸ & ಪುನರ್ಬಲನ ತಂತ್ರ.

⇝ ಕನ್ನಡ - ದಕ್ಷಿಣ ದ್ರಾವಿಡ ಭಾಷೆ
⇝ ಬ್ರಾಹುಯಿ, ಮಾಲ್ತೋ, ಕುರುಖ್ - ಉತ್ತರ ದ್ರಾವಿಡ ಭಾಷೆ

...ನ
...ಕೆ)

ಆರ್ - ಭಾಷಾ ...
ತರಣಿ - ಸ್ವಾಯತ್ತ
ತರಣಿ - ಜೀವಿ/ ರಚಿತ್ವ

DATE: PAGE:

11/05/2024

## ಭಾಷಾ ಬೋಧನಾ ತತ್ವಗಳು:

| (ಪ್ರಾರಂಭ) ಸಿದ್ಧತಾ | (ಪ್ರಚೋ. ) ಅನುಕರಣೆ | (ಸಂತೃಪ್ತಿ) ಪುನರ್ಬಲನ | (ಪುನರಾವರ್ತಿ) ಅಭ್ಯಾಸ |
|---|---|---|---|
| * ಥಾರ್ನಡೈಕ್‌ರ | * ಬಂಡೂರರವರ | * ಸ್ಕಿನ್ನರ್ ರವರ | * ಥಾರ್ನಡೈಕ್‌ರ |
| ಪ್ರಯತ್ನ-ಪ್ರಮಾ-ದ ಕಲಿಕೆ | ವೀಕ್ಷಣಾ ಸಿದ್ಧಾಂತ/ ಅನುಕರಣಾ ಕಲಿಕೆ | ಕ್ರಿಯಾಜನ್ಯ ಕಲಿಕೆ | ಪ್ರಯತ್ನ-ಪ್ರಮಾದ ಕಲಿಕೆ |
| | | * ಪುರಸ್ಕಾರ/ ಬಹುಮಾನ (ಪ್ರಶಂಸೆ ಅಭಿನಂದನೆ) | * ದೃಢೀಕರಣ (ಭಾಷಾ ಕಲಿಕೆ) |
| * ಶಾಲೆ | * ಸಹಜ/ ಸ್ವಾಭಾವಿಕ | | |
| ಅಂಶಗಳು - ಕಲ್ಪನೆ | ಪ್ರಕ್ರಿಯೆ. ಪ್ರಯತ್ನ/ | | |
| ದೃಷ್ಟಿ, ಧ್ವನಿ ಅಂಗಗಳು | ಕ್ರಿಯೆ ಕಲಿಯುತ್ತದೆ. | | |
| ಮಾನಸಿಕ ಕ್ರಿಯೆ - ಪ್ರಚೋ | * ಮಾತೃಭಾಷೆ (ಭಾಷಾ ಕಲಿಕೆ/ ಸ್ವಾಭಾವಿಕ) | | |

...ರ್ಥ ಅರಿಯುವುದು

ಗುಣುಗುಣಿಸು,
ಗಟ್ಟಿಯಾಗಿ, ಮೌನವಾಗಿ,
...ಚಿಸು.

ಅರ್ಥ ಗ್ರಹಿಸುತ್ತದೆ.
...ಗು - ಹೊಂದಿಸುವ
ಅಕ್ಷರ ಅಕ್ಷರ.

...ನೆ - ಬರಹ, ಸಾಮ್ಯ ಹೋಲಿ
...ಗಳು - ಶಬ್ದಗಳು,
...ಯ - ಕಲಿಕೆ,
...ಬದ್ಧತೆ ಪದಗಳು,

...ಕೃತಿ - ಬರಹ

...
...ರ

### 3) ಪುನರ್ಬಲನ ತತ್ವ:

⇒ ಮಕ್ಕಳು ಭಾಷಾ ಕಲಿಕೆಯಲ್ಲಿ ಸರಿ ತಪ್ಪುಗಳನ್ನು ಗಮನಿಸಿ ಅವಶ್ಯಕ ಪುನರ್ಬಲನದೊಂದಿಗೆ ಕಲಿಕೆಯನ್ನು ಶಿಸ್ತುಬದ್ಧಗೊಳಿಸಬೇಕು.

⇒ ಸಂದರ್ಭಕ್ಕೆ ಉತ್ತೇಜಿಸಬೇಕು ಅದೇ ರೀತಿ ತಪ್ಪಿರುವುದನ್ನು ತಿದ್ದಿ ಹೇಳಬೇಕು.

⇒ ತಪ್ಪು, ದೋಷ ಗಮನಿಸಿ ಸರಿಪಡಿಸಬೇಕು. ಅಭ್ಯಾಸದ ಹಂತದಲ್ಲಿ ಅರ್ಥಬದ್ಧ ಚಟುವಟಿಕೆ ನೀಡಿ ಪುನರ್ಬಲನಗೊಳಿಸಬೇಕು.

### 4) ಅಭ್ಯಾಸ ತತ್ವ:

⇒ ಮಕ್ಕಳು ಅನುಕರಣೆಯಿಂದ ಭಾಷಾ ಕಲಿಕೆ ಪ್ರಾರಂಭಿಸುತ್ತಾರೆ. ಇದು ಯಶಸ್ವಿಯಾಗಿ ಮುಂದುವರೆಯಬೇಕಾದರೆ

⇒ ಅನುಕರಣೆಯಿಂದ ಭಾಷಾ ಕಲಿಕೆ ಪ್ರಾರಂಭವಾದರೆ ಅಭ್ಯಾಸವು ಭಾಷಾ ಕಲಿಕೆಯನ್ನು ಗಟ್ಟಿಗೊಳಿಸುತ್ತದೆ/

* ಪ್ರಯೋಜಕ → ಮೂಲ ಭಾಷಾ ಕೌಶಲ

* ಆರಂಭದ ಪ್ರೇರಕ & ಮಾನಸಿಕ

ಸಿದ್ಧತೆಯು ಮತ್ತೆಯು ಅನುಕರಣೆಗೆ, ಅನುಕರಣೆಯು ಪುನರಾವರ್ತನೆಗೆ & ಪುನರಾವರ್ತನೆಯು ಅಭ್ಯಾಸದ ತತ್ತ್ವಕ್ಕೆ ಸಹಕಾರಿಯಾಗಿದೆ.

* ಮಕ್ಕಳು ಕೇಳಿದ ಹಾಗೆ ಮಕ್ಕಳು ಮಾತನಾಡುತ್ತಾರೆ.

* ಪ್ರಾರಂಭಿಕ & ಬಲಪಡಿಸುವ ತತ್ತ್ವ – ಸಿದ್ಧತಾ & ಪುನರಾವರ್ತನೆ / ಅನುಕರಣೆ & ಅಭ್ಯಾಸ ತತ್ತ್ವಗಳು.

- ದೃಢೀಕರಿಸುತ್ತದೆ).

⇒ ಮಾತು, ಓದು, ಬರಹ ಕೌಶಲಗಳು ಅಭ್ಯಾಸದಿಂದಲೇ ಸ್ಥಿರಗೊಳ್ಳಬೇಕು.

⇒ ನಿರಂತರ & ಕ್ರಮಬದ್ಧ ಅಭ್ಯಾಸಗಳಿಂದ ಭಾಷಾ ಕೌಶಲಗಳು ಗಟ್ಟಿಗೊಳ್ಳಬೇಕು. ಆದ್ದರಿಂದ ಶಿಕ್ಷಕರು ಸತತ ಕ್ರಮಬದ್ಧ ಚಟುವಟಿಕೆ / ಅಭ್ಯಾಸ ಚಟುವಟಿಕೆಗಳನ್ನು ನೀಡಬೇಕು

→

5) ಜೀವಂತ ಕಲಿಕಾ ತತ್ತ್ವ:

→ ಸಹಜ ಕಲಿಕಾ ಸನ್ನಿವೇಶ / ನೈಜ / ಜೀವಂತ ಸನ್ನಿವೇಶ.

6) ಸ್ವಾಭಾವಿಕ ಕ್ರಮದ ತತ್ತ್ವ:

→ ಸರಳತೆಯಿಂದ – ಕಠಿಣತೆಗೆ

→ ಆಲಿಸು → ಮಾತು → ಓದು → ಬರವಣಿಗೆ

↳ ಇದು ಸ್ವಾಭಾವಿಕ ಕ್ರಮ.

→ ಗೊತ್ತಿರುವುದರಿಂದ – ಗೊತ್ತಿಲ್ಲದರ ಕಡೆಗೆ.

DATE: PAGE:

| Input (ಸ್ವೀಕಾರಾತ್ಮಕ) | output (ಅಭಿವ್ಯಕ್ತಿ ಕೌಶಲ) |
|---|---|
| Receptive (ಗ್ರಹಣ ಕೌ) | productive (ಉತ್ಪಾದನಾ ಕೌಶಲ) |
| Passive skill | Active skill |
| Primary skill (ಪ್ರಾಥಮಿಕ ಕೌಶಲ) | Secondary skill (ದ್ವಿತೀಯಕ ಕೌಶಲ) |
| Listening (ಆಲಿಸು) | Speaking (ಮಾತು) |
| Reading (ಓದು) | Writing (ಬರವಣಿಗೆ) |

Oral skills (ಮೌಖಿಕ ಕೌಶಲಗಳು)

⇒ Listening & Speaking

Writing skills (ಬರವಣಿಗೆ / ಲಿಖಿತ ಕೌಶಲ)

⇒ Reading & Writing

* ಮೌಖಿಕ ಕೌಶಲಗಳು ಅಕ್ಷರಸ್ಥರು & ಅನಕ್ಷರಸ್ಥರಿಗೂ ಅನುಕೂಲ.

* ಲಿಖಿತ ಕೌಶಲಗಳು ಕೇವಲ ಅಕ್ಷರಸ್ಥರಿಗೆ ಅನುಕೂಲವಾಗಿದೆ.

* ಅನುಕರಣೆಯಿಂದ ಉಂಟಾದ ತಪ್ಪುಗಳನ್ನು ತಿದ್ದುವುದೇ ಪುನರಾವರ್ತನೆ ತತ್ತ್ವ

* ಭಾಷಾ ಕೌಶಲಗಳನ್ನು ದೃಢೀಕರಿಸುವುದು / ಬಲಗೊಳಿಸುವುದು / ಸ್ಥಿರಗೊಳಿಸುವುದು – ಅಭ್ಯಾಸ ತತ್ತ್ವ

⇒ ಮುಕ್ತ ವಾತಾವರಣದಲ್ಲಿ ಸ್ವಯಂ ಕಲಿಕೆ.

7) ಅನುಕ್ರಮಣಿಕೆ ತತ್ತ್ವ:

→ ಅಕ್ಷರ / ಶಬ್ದ / ಪದ / ವಾಕ್ಯ / ವಾಕ್ಯ ವೃಂದ

⇒ ಕೊನ್ನರ್ ಕ್ರಮ ಬೆಳವಣಿಗೆ ಕಲಿಕೆ ಆಧರಿಸಿದೆ.

8) ಅಭ್ಯಾಸ ಕಲಿಕೆಯ ತತ್ವ:

→ ಕೇಳುವ, ನೋಡುವ, ಮಾತನಾಡುವ ಓದುವ ಬರೆಯುವ ಕೌಶಲ್ಯಗಳನ್ನು ಅಭ್ಯಾಸ ತತ್ವಗಳಾಗಿ ಮಾರ್ಪಡಿಸಿ ಕೊಳ್ಳುತ್ತದೆ.

→ ಥಾರ್ನ್‌ಡೈಕ್ ರವರ ಸಿದ್ಧಾಂತವನ್ನು ಆಧರಿಸಿದೆ.

→ ನಿರಂತರ & ಪುನರಾವರ್ತಿತ ತತ್ವವು ಅಭ್ಯಾಸ ತತ್ವವಾಗಿ ಬದಲಾಗುತ್ತದೆ.

9) ಪ್ರಚೋದನೆ & ಪ್ರತಿಕ್ರಿಯೆ ತತ್ವ:

→ ಥಾರ್ನ್‌ಡೈಕ್ ತತ್ವ ಆಧರಿಸಿದೆ.

10) ಅರ್ಥಪೂರ್ಣ ಗ್ರಹಿಕೆ ತತ್ವ:

→ ವಿದ್ಯಾರ್ಥಿಗಳು ಅರ್ಥಪೂರ್ಣವಾಗಿ ಗ್ರಹಿಸಿದರೆ ಮಾತ್ರ ಕಲಿಕೆ ಉಂಟಾಗುತ್ತದೆ.

→ Meaningful learning

→ ಆಸುಬೆಲ್ ರ ಕೊಡುಗೆಯಾಗಿದೆ.

→ ಅರ್ಥವತ್ತಾದ ಅರ್ಥಪೂರ್ಣದ ಗ್ರಹಿಕೆ ಕಲಿಕೆಯಾಗಿದೆ.

11) ಕ್ರಿಯಾತ್ಮಕ ತೊಡಗಿಸಿಕೊಳ್ಳುವ ತತ್ವ:

→ ಸ್ಕಿನ್ನರ್ ತತ್ವ.

→ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುವ ತತ್ವ.

12) ಸಮನ್ವಯದ ತತ್ವ

→ ಶಿಕ್ಷಕ ತನ್ನ ತರಗತಿಯ ಭೋಧನಾ, ಭಾಷ್ಯವೈವಿಧ್ಯ ಸಾಮರ್ಥ್ಯ ಬಳಸಿಕೊಂಡು ಎಲ್ಲಾ ವಿಷಯಗಳಲ್ಲಿ ಕಲಿಸಬೇಕಾಗಿದೆ

→ ಭಾಷೆ, ಶಿಕ್ಷಣ ತತ್ವ ಎಂದೂ ಕರೆಯುತ್ತಾರೆ

→ ಪ್ರತಿಯೊಬ್ಬ ಶಿಕ್ಷಕರು ಸಮನ್ವಯದ ತತ್ವವನ್ನು ಅನ್ವಯಿಸಬೇಕು

12/05/24

ಕನ್ನಡ ಭಾಷಾ ಸಾಮರ್ಥ್ಯ ಪರೀಕ್ಷೆ.

* ಪತ್ರ ಪ್ರಬಂಧ 5M

* ಪದ್ಯ ಸಾರಾಂಶ 5M

* ಪತ್ರ ಬರೆಹ 5M

* ಗಾದೆ ಮಾತು ವಿಸ್ತರಣೆ 5M

* ಟಿಪ್ಪಣಿ 5M

ಆ) ಕವನ/ದಾಸರ ಪದ/ ವಚನದ/ ಸಂಪ್ರದಾಯ

ಪದ್ಯದ ಸಾರಾಂಶ

→ ಭಾವಾರ್ಥ
→ ತತ್ವ
→ ನೈತಿಕ ಮೌಲ್ಯ/ಸ್ತ್ರೀ ಅಭಿವ್ಯಕ್ತಿ
→ ಅಲಂಕಾರ
→ ಛಂದಸ್ಸು ವಿಶ್ಲೇಷಣೆ
→ ವಿಶ್ಲೇಷಣೆ
→ ಮುಕ್ತಾಯ.

14/05/24

## ಭಾಷಾ ಕೌಶಲಗಳು

**ಆಲಿಸುವಿಕೆ:**

* ಇದೊಂದು ಪ್ರಧಾನ ಕೌಶಲ; ಆರಂಭಿಕ ಕೌಶಲ, ಮೂಲಕೌಶಲ.
→ ಇದು ಮಾನಸಿಕ ಕ್ರಿಯೆ, ಸ್ವಾಭಾವಿಕ ಕ್ರಿಯೆ.
→ ಇದು ಅಕ್ಷರಸ್ಥರು & ಅನಕ್ಷರಸ್ಥರಿಗೂ ಸಾಧ್ಯವಾಗಿದೆ.
→ ಆಲಿಸುವಿಕೆ & ಮಾತನಾಡುವಿಕೆ ಅನುಕ್ರಮವಾಗಿ ನೆರವೇರುತ್ತದೆ.
→ ಆಲಿಸುವಿಕೆ ಮಾತುಗಾರಿಕೆಗೆ ಕಾರಣವಾಗುತ್ತದೆ.
→ ಆಲಿಸುವಿಕೆ ಉದ್ದೇಶ ಹೊಂದಿಕೆ, ಪ್ರಜ್ಞಾಪೂರ್ವಕ, ಕ್ರಮಬದ್ಧ & ಅರ್ಥಪೂರ್ಣವಾದ ಮಾನಸಿಕ ಕ್ರಿಯೆಯಾಗಿದೆ.
→ ಆಲಿಸುವಿಕೆ (ಕೇಳುವಿಕೆ) ಧ್ವನಿಯನ್ನು ಅರ್ಥೈಸಿಕೊಂಡು ಹೇಳುವವರ ಅಂತರ ಹಾವಭಾವಗಳನ್ನು ಅರ್ಥೈಸುತ್ತ ಸಂಪೂರ್ಣ ಕಲಿಕೆ ಉಂಟಾಗುತ್ತದೆ.
→ ಆಲಿಸುವಿಕೆ ಒಂದು ಗ್ರಹಣ ಕೌಶಲ, ಸ್ವೀಕಾರಾರ್ಹ ಕೌಶಲ.
→ ಇದೊಂದು ಮೊದಲ್ ಉತ್ಪಾದಕ ಕೌಶಲ
→ ಇದೊಂದು ಪರೋಕ್ಷ ಕೌಶಲ. (Compherension - ಗ್ರಹಿಕೆ)
→ ಆಲಿಸುವಿಕೆಯಲ್ಲಿ ಮಾನಸಿಕ ಸಿದ್ಧತೆ, ಆಸಕ್ತಿ, ಅವಧಾನ, ಅರ್ಥಗ್ರಹಿಕೆ, ಸ್ಮರಣೆ ಇರುತ್ತದೆ.

**ಆಲಿಸುವಿಕೆಯ ಪ್ರಾಮುಖ್ಯತೆ:**

* ಆಲಿಸುವಿಕೆಯನ್ನು ಕಲಿಯದ ವ್ಯಕ್ತಿ ಉಳಿದ ಕೌಶಲಗಳನ್ನು ಕಲಿಯುವುದು ಕಷ್ಟ.
* ಮಾತು, ಓದು, ಬರಹ, ಆಲೋಚನೆ & ಅಭಿನಯ ಗ್ರಹಿಕೆ ಆಲಿಸುವಿಕೆ ನೆರವಾಗುತ್ತದೆ.

DATE: PAGE:

* ಚಿತ್ರಗಳ ವೀಕ್ಷಣೆಯಲ್ಲಿ, ಸಂಗ್ರಹಾಲಯಗಳ ಜ್ಞಾನಾರ್ಜನೆಗೆ ಮತ್ತು ಪ್ರವಾಸಗಳ ಚರ್ಚೆಗಳಲ್ಲಿ ಪ್ರಶ್ನೆಗಳು ಇದು ನೆರವಾಗುತ್ತದೆ.

ಆಲಿಸುವಿಕೆಯ ದೋಷ:

* ಮಾನಸಿಕ ಸಿದ್ಧತೆ ಇಲ್ಲದೇ ಇರುವುದು.
* ದೈಹಿಕ ಆಯಾಸ, ಶ್ರವಣ ದೋಷ, ಮಾನಸಿಕ ಅಸ್ವಸ್ಥತೆ (ಸಂಕೋಚ) ಅಸಮರ್ಪಕ ಕೇಳುವಿಕೆ.

ಆಲಿಸುವಿಕೆಯನ್ನು ಉತ್ತಮ ಪಡಿಸುವ ಕ್ರಮಗಳು.

* ಮೊದಲಿಗೆ ಉದ್ದೇಶಪೂರ್ವಕವಾಗಿ ಅವಧಾನ ಕೇಳುವಿಕೆಯನ್ನು ರೂಢಿ ಮಾಡಬೇಕು.
* ದೈಹಿಕ & ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು.
* ಆಸಕ್ತಿಯಿಂದ, ಏಕಾಗ್ರತೆ, ಅವಧಾನದಿಂದ ಆಲಿಸುವಿಕೆ ರೂಢಿಸಿಕೊಳ್ಳಬೇಕು.
* ಅರ್ಥಗ್ರಹಿಕೆ ಆಗಬೇಕು, ಉತ್ಸುಕರಾಗಿ ಆಲಿಸಬೇಕು.
* ಮೌನವಾಗಿ / ಶಿಸ್ತುಬದ್ಧವಾಗಿ ಆಲಿಸಬೇಕು.
* ಹೇಳುವವರ ಮುಖದ ಭಾವಗಳನ್ನು ನೋಡುತ್ತಾ ಆಲಿಸಬೇಕು.
* ಆತುರಪಡದೇ ಸಾವಧಾನವಾಗಿ ಆಲಿಸಬೇಕು.
* ಸಹಜವಾಗಿ ಆಲಿಸಬೇಕು.

ಆಲಿಸುವ ಸಾಮರ್ಥ್ಯ ಹೆಚ್ಚಿಸುವ ಚಟುವಟಿಕೆಗಳು.

* ಧ್ವನಿ ಮುದ್ರಣವನ್ನು ಆಲಿಸಿ ಬರೆಯುವುದು.
* ಉದ್ದೇಶಪೂರ್ವಕ, ಪ್ರಜ್ಞಾಪೂರ್ವಕ ಕ್ರಮಬದ್ಧ ಮತ್ತು ಅರ್ಥಪೂರ್ಣವಾಗಿ ಆಸಕ್ತಿಯಿಂದ ಏಕಾಗ್ರತೆ, ಅವಧಾನದಿಂದ ಆಲಿಸಲು ಕಲಿಸುವುದು.
* ಸಂಭಾಷಣೆ, ಕಥೆ ಹೇಳುವುದು, ಗಟ್ಟಿಯಾಗಿ ವಾಚನ ಮಾಡುವುದು, ಉಪನ್ಯಾಸ ಕೇಳುವುದು, ಭಾಷಣ ಕೇಳು ಪ್ರಶ್ನೆಗಳು ಉತ್ತರ ಮಾಡುವುದು, ರೇಡಿಯೋ ದೂರದರ್ಶನ & ದೃಶ್ಯ, ಶ್ರವ್ಯ ಮಾಧ್ಯಮಗಳ ಬಳಕೆ, ಆಟ, ಪ್ರಾರ್ಥನೆ, ಸಂದರ್ಶನ, ಚರ್ಚಾ ಅವಧಿ, ಸಮ್ಮೇಳನದಲ್ಲಿ ಶಾಲಾ ಸಂಘಟನೆಯಲ್ಲಿ ಶಿಕ್ಷಕರು ಮಾಡುವ ಸೂಚನೆಗಳು.

## ಮಾತುಗಾರಿಕೆ ಕೌಶಲ:

DATE: PAGE:

* ಶಾಬ್ದಿಕ & ಮಾನಸಿಕ ಕ್ರಿಯೆ.
* ಧ್ವನಿ ಸಂಕೇತಗಳ ಮೂಲಕ ಮಾತುಗಾರಿಕೆ ನಡೆಯುತ್ತದೆ.
* ವ್ಯಕ್ತಿ ⓐ ವಿದ್ಯಾರ್ಥಿ ತನ್ನ ಭಾವನೆ, ಅನಿಸಿಕೆ, ಅಭಿಪ್ರಾಯ, ವಿಚಾರ ಆಲೋಚನೆಗಳನ್ನು ಇತರರಿಗೆ ಧ್ವನಿ ಸಂಕೇತಗಳ ಮೂಲಕ ಅರ್ಥಬದ್ಧವಾಗಿ ಸುಸಂಬದ್ಧವಾಗಿ ಶಾಬ್ದಿಕವಾಗಿ ಪ್ರಕಟಪಡಿಸುವುದೇ ಮಾತುಗಾರಿಕೆ.
* ಮಾತುಗಾರಿಕೆ ಒಂದು ಕಲಾತ್ಮಕ ಕೌಶಲ.
* ಇದೊಂದು ಅಭಿವ್ಯಕ್ತಿ ಕೌಶಲ.
* ಇದೊಂದು ಉತ್ಪಾದಕ ಕೌಶಲ, ಕ್ರಿಯಾತ್ಮಕ & ಜೀವ ಕೌಶಲ.

ಪ್ರಾಮುಖ್ಯತೆ:
* ಮಾತುಗಾರಿಕೆ ಒಂದು ಸಂವಹನ ಸಾಧನ.
* ಇದು ಮಾನಸಿಕ ವಿಕಾಸಕ್ಕೆ ಸಹಾಯಕ.
* ಸಂವಹನಕ್ಕೆ ವಿಚಾರವಿನಿಮಯಕ್ಕೆ & ಅಭಿವ್ಯಕ್ತಿಗೆ ಸಹಾಯಕ
* ಸಮಾಜದ ಉನ್ನತಿಗೆ ಸಹಾಯಕ.
* ಸಾಮಾಜಿಕ ಅಂತರ್ ಸಂಬಂಧ.
* ಇದು ಸಾಹಿತ್ಯ, ಸಂಸ್ಕೃತಿ, ಪ್ರಕೃತಿ, ವ್ಯವಹಾರ & ಬೋಧನಾ ಮಾಧ್ಯಮವಾಗಿ ಸಹಾಯಕ.

ಮಾತುಗಾರಿಕೆಯ ಉದ್ದೇಶಗಳು:
* ಭಾಷಾ ನಿರರ್ಗಳತೆ, ಅರ್ಥಬದ್ಧ ಮಾತುಗಾರಿಕೆ ಉದ್ದೇಶ.
* ಸ್ಪಷ್ಟ ಉಚ್ಚಾರ ಮಾಡುವುದು.
* ವ್ಯಾಕರಣ ಶುದ್ಧತೆ ನೆರವೇರುತ್ತದೆ.
* ಇದು ಅಭಿವ್ಯಕ್ತಿ ಕೌಶಲ.

ಮಾತುಗಾರಿಕೆ ಬೆಳೆಸುವುದು:
ಭಾಷಣ, ಚರ್ಚೆ, ಸಂಭಾಷಣೆ, ಅಭಿಪ್ರಾಯ ತಿಳಿಸುವುದು, ವಿವರಣೆ ನೀಡುವುದು, ಕಥೆ ಹೇಳುವುದು.

ಮಾತುಗಾರಿಕೆಯಲ್ಲಿನ ದೋಷಗಳು:

1) ಶಾರೀರಿಕ ದೋಷ:
ಧ್ವನ್ಯಂಗಗಳಲ್ಲಿ ದೋಷ, ಧ್ವನಿ ಪೆಟ್ಟಿಗೆಗಳ ದೋಷ (ಕಂಠ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ, ಗಲಗ್ರಂಥಿ).

2) ಉಚ್ಚಾರಣಾ ದೋಷ :-

ಅಲ್ಪಪ್ರಾಣ, ಮಹಾಪ್ರಾಣ, ಸಂಯುಕ್ತಾಕ್ಷರಗಳ ಬಳಕೆಯ ದೋಷ.

3) ಪರಿಸರದ ದೋಷ :-

ಜನ ಸಂಪರ್ಕದ ಪ್ರಭಾವ, ಪರಭಾಷಾ (ಪರಿಸರದಲ್ಲಿ) ಪ್ರಭಾವ.

ಮಾತುಗಾರಿಕೆ ಚಟುವಟಿಕೆ : (ಭಾಷಣ ಕೌಶಲ್ಯ)

ಕಂಠ ಪಾಠ, ನಾಟಕಾಭಿನಯ, ಕಥಾ ಪಠಣ, ಸಂಭಾಷಣೆ, ಚರ್ಚಾ ಗೋಷ್ಠಿ, ಚರ್ಚಾ ಕೂಟ, ಪಾತ್ರಾಭಿನಯ, ಆಶುಭಾಷಣ, ಉಪನ್ಯಾಸ, ವಿಚಾರ ಸಂಕಿರಣ (Seminar) ಗಟ್ಟಿ ವಾಚನ, ಚಿತ್ರ ವರ್ಣನೆ, ಏಕಪಾತ್ರಾಭಿನಯ, ವರದಿ ವಾಚನ, ವಿಚಾರ ಗೋಷ್ಠಿ (Seminar).

ಉಕ್ತಲೇಖನ : (Dictation)

ಓದು, ಗಟ್ಟಿ ಓದು, ಆಲಿಸುವುದು & ಬರವಣಿಗೆ ದೋಷ ಕಂಡು ಹಿಡಿಯುವುದು.

* ಕೌಶಲ್ಯಗಳಿಗೆ ಮಾತುಗಾರಿಕೆಯ ದೋಷ

- ದ್ವಿಮುಖ
  - ಗ್ರಹಿಕೆ
    - ಆಲಿಸುವುದು (L) (ಗ್ರಹಿಕೆ)
    - ಓದುವುದು (R) (ಗ್ರಹಿಕೆ)
  - ಉತ್ಪನ್ನ
    - ಮಾತನಾಡುವುದು (R) ಅಭಿವ್ಯಕ್ತಿ
    - ಬರೆಯುವುದು (W) ಅಭಿವ್ಯಕ್ತಿ

- ಭಾಷೆ
  - ಚಾಕ್ಷುಷ
    - ಓದುಗಾರಿಕೆ (R) ಗ್ರಹಿಕೆ
    - ಬರವಣಿಗೆ (W) ಅಭಿವ್ಯಕ್ತಿ
  - ಶ್ರಾವಣ
    - ಆಲಿಸುವುದು (L) ಗ್ರಹಿಕೆ
    - ಮಾತನಾಡುವುದು (S) ಅಭಿವ್ಯಕ್ತಿ

DATE: PAGE:

* ಅನಕ್ಷರಸ್ಥರಿಗೆ – ಮಾತನಾಡುವುದು, ಆಲಿಸುವುದು ಗೊತ್ತಿರುತ್ತದೆ

* ಅಕ್ಷರಸ್ಥರಿಗೆ – ಮಾತನಾಡುವುದು, ಆಲಿಸುವುದು, ಬರೆಯುವುದು, ಓದುವುದು ಗೊತ್ತಿರುತ್ತದೆ

# ಓದುಗಾರಿಕೆ

- ಓದುವುದು ಒಂದು ಮಾನಸಿಕ ಹಾಗೂ ಶಾಬ್ದಿಕ ಕ್ರಿಯೆ.
- ಮುದ್ರಿತ ಪದ, ವಾಕ್ಯಗಳನ್ನು ನೋಡಿ ಗಮನಿಸಿ ಅರ್ಥಮಾಡಿಕೊಳ್ಳುವುದಾಗಿದೆ.
- ಲಿಪಿಯನ್ನು ಶಬ್ದ ರೂಪದಲ್ಲಿ ಅರ್ಥಬದ್ಧವಾಗಿ ಹೊರಹೊಮ್ಮಿಸುವ ಕ್ರಿಯೆಯೇ ಓದುಗಾರಿಕೆ.

* ಪದ, ವಾಕ್ಯದಲ್ಲಿ ಅಡಗಿರುವ ಅರ್ಥಕ್ಕೆ ಅನುಗುಣವಾದ ಧ್ವನಿ ಮತ್ತು ಉಚ್ಚಾರಗಳಿಂದ ಓದು ಕ್ರಿಯೆ ಪ್ರಕಟವಾಗುತ್ತದೆ.
* ಓದುಗಾರಿಕೆ ಶಾಬ್ದಿಕವಾಗಿದ್ದರೆ - ಗಟ್ಟಿವಾಚನವೆಂದರು।
  → ಗಟ್ಟಿವಾಚನವು ಶಾಬ್ದಿಕ & ಮಾನಸಿಕ ಕ್ರಿಯೆಯಾಗಿದೆ.
  → ಇದನ್ನು ಬಾಹ್ಯೋದು, ಬಾಹ್ಯರಂಗ ಓದು ಎನ್ನುವರು.
* ಶಬ್ದವಿಲ್ಲದೆ ಮಾನಸಿಕವಾಗಿ ಓದಿ ಅರ್ಥಗ್ರಹಿಸಿದರೆ - ಮೌನವಾಚನ ಎನ್ನುವುದು.
  → ಇದೊಂದು ಮಾನಸಿಕ ಕ್ರಿಯೆಯಾಗಿದೆ.
* ಓದುಗಾರಿಕೆಯು ಮನೋವೈಜ್ಞಾನಿಕ ಪ್ರಕ್ರಿಯೆಯಾಗಿದೆ.
* ಓದುಗಾರಿಕೆಯು ಮಾನಸಿಕ ಸಿದ್ಧತೆ, ಆಸಕ್ತಿ, ಪ್ರಚೋದನೆ, ಏಕಾಗ್ರತೆ, ಅರ್ಥಗ್ರಹಿಕೆ, ಕಲ್ಪನೆ, ಸ್ಮರಣೆ ಮತ್ತು ಆಲೋಚನಾ ಕೌಶಲಗಳು ಸಮನ್ವಯಗೊಂಡು ಕೆಲಸ ಮಾಡುತ್ತದೆ. ಆದ್ದರಿಂದ 'ಓದು' ಒಂದು ಆಲೋಚನಾ ಕ್ರಿಯೆಯಾಗಿದೆ.

ಭಾಷಾಶಾಸ್ತ್ರಜ್ಞರ ಪ್ರಕಾರ - ಮುದ್ರಿತ ಲಿಪಿಯ ಜೊತೆ ವ್ಯಕ್ತಿಯೊಬ್ಬನು ನಡೆಸುವ ಮಾನಸಿಕ ಅಂತರ ಕ್ರಿಯೆಯೇ ಓದುಗಾರಿಕೆ.

* ಲಿಪಿಗಳು ಕಣ್ಣುಗಳ ಮೂಲಕ ಮನಸ್ಸನ್ನು ಪ್ರವೇಶಿಸಿ ಭಾಷೆಯ ಮೂಲಕ ಧ್ವನಿಯಾಗಿ ಅರ್ಥಪೂರ್ಣವಾಗಿ ಹೊರಹೊಮ್ಮುವುದೇ ಓದು.
* ಓದುವುದು ಒಂದು ಮನೋಭಾಷಿಕ ಪ್ರಕ್ರಿಯೆ.
* ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಪದಸಂಪತ್ತು, ಬರಹ, ವಾಕ್ಯ-ರಚನೆ, ಲೇಖನ ಚಿಹ್ನೆಗಳು ಇತ್ಯಾದಿ ಕೌಶಲಗಳು ಓದುಗಾರಿಕೆಗೆ ಅಗತ್ಯ.

* ಓದುಗಾರಿಕೆ ಒಂದು ಆಲೋಚನಾ ಕ್ರಿಯೆ & ಕಲಿಕಾ ಪ್ರಕ್ರಿಯೆ.
(ಹೊಸ ವಿಷಯ, ಕಲಿಯಲು ಹೊಸ ಆಲೋಚನೆ ಮಾಡಲು)

## ಓದುಗಾರಿಕೆಯ ಪ್ರಾಮುಖ್ಯತೆ:

- ಸಾಮಾಜಿಕ ಸಂಪರ್ಕಕ್ಕಾಗಿ, ಅರ್ಥ ಗ್ರಹಿಕೆಗಾಗಿ, ಜ್ಞಾನಾರ್ಜನೆಗಾಗಿ, ವ್ಯವಹಾರಕ್ಕಾಗಿ, ಇತಿಹಾಸ ಅರಿಯಲು, ಶಿಕ್ಷಣ ಸಾಹಿತ್ಯ & ಸಂಸ್ಕೃತಿ ಉನ್ನತಿಗಾಗಿ, ಸಮಕಾಲೀನ ಜ್ಞಾನಕ್ಕಾಗಿ, ವೈಚಾರಿಕತೆ - ವೈಜ್ಞಾನಿಕತೆಗಾಗಿ.
- ಓದುಗಾರಿಕೆಗೆ ಹೆಚ್ಚು ತರಬೇತಿ ನೀಡುವುದು. ಉತ್ತಮ ಪುಸ್ತಕಗಳು, ಗ್ರಂಥಾಲಯ ಪತ್ರಿಕೆಗಳು, ನಿಯತಕಾಲಿಕೆಗಳನ್ನು ಒದಗಿಸುವುದು.
- ಶಿಕ್ಷಣ ಕ್ಷೇತ್ರದಲ್ಲಿ ಓದು ಹವ್ಯಾಸ ಬೆಳೆಸಲು, ವಿಷಯ ಗ್ರಹಿಸಲು, ಜ್ಞಾನಾರ್ಜನೆಗಾಗಿ, ಆಲೋಚನಾ ಶಕ್ತಿ ಹೆಚ್ಚಿಸಲು, ಭಾಷಾ ಕೌಶಲಗಳ ಬೆಳವಣಿಗೆಗೆ ಸಾಂಸ್ಕೃತಿಕ & ಭಾವನಾತ್ಮಕ ಬೆಳವಣಿಗೆ, ಸಾಹಿತ್ಯಾಭಿರುಚಿ ಬೆಳೆಸಲು, ಸಮಕಾಲೀನ ಜ್ಞಾನ ಗ್ರಹಿಕೆಗೆ, ಪರೀಕ್ಷೆಗೆ ಸಿದ್ಧತೆಗಾಗಿ, ವ್ಯಕ್ತಿತ್ವ ವಿಕಾಸಕ್ಕಾಗಿ, ಪತ್ರಿಕೆ, ನಿಯತಕಾಲಿಕೆಗಳಿಂದ ಜ್ಞಾನ ಪಡೆಯಲು.

## ಓದುಗಾರಿಕೆ ಕಲಿಸುವ ಉದ್ದೇಶ:

- ಸರಳ, ಸುಸ್ಪಷ್ಟ, ನಿರರ್ಗಳವಾಗಿ ಅರ್ಥಬದ್ಧವಾಗಿ ಓದುವ ಕೌಶಲ ಬೆಳೆಸುವುದು.
- ಗಟ್ಟಿವಾಚನ, ಮೌನವಾಚನ, ಆಳವಾದ ವಾಚನ, ವಿಶಾಲವಾದ ವಾಚನ, ಸ್ಥೂಲವಾಚನ, ಸೂಕ್ಷ್ಮವಾಚನ, ವಿಮರ್ಶಾತ್ಮಕ ವಾಚನ ಇತ್ಯಾದಿ ಓದಿನ ಪ್ರಕಾರಗಳು ಕೌಶಲಗಳನ್ನು ಬೆಳೆಸುವುದು.
- ಪಠ್ಯವನ್ನು ವೇಗವಾಗಿ ಓದಿ ಗ್ರಹಿಸಲು, ಓದುಗಾರಿಕೆ ಹವ್ಯಾಸ, ಸಾಹಿತ್ಯಾಭಿರುಚಿ, ಜ್ಞಾನಾರ್ಜನೆ, ತರ್ಕಬದ್ಧ ಸೃಜನಶೀಲ ಚಿಂತನೆ ಬೆಳೆಸುವುದು.
- ವಾಕ್ಯವೃಂದ, ಕಥೆ, ಕವನ, ಕಾವ್ಯ, ನಾಟಕ, ಕಾದಂಬರಿ, ಪ್ರಬಂಧ ... ಸ್ವತಂತ್ರವಾಗಿ ಓದಿ, ಆಸ್ವಾದಿಸಲು ಸಹಕಾರಿಯಾಗಿದೆ.

## ಓದುಗಾರಿಕೆಯಲ್ಲಿ ಬಳಸಲ್ಪಡುವ ಕೌಶಲಗಳು:

1) ಭಾಷಾ ಕೌಶಲಗಳು: ಅಕ್ಷರ ಪದ ಸಂಯೋಜಿಸಿ ಓದುವ ಕೌಶಲ / ಪದ ವಾಕ್ಯ ಗ್ರಹಿಸಿ / ವ್ಯಾಕರಣ ಲಕ್ಷಣ ಬಗ್ಗೆ ಅರ್ಥೈಸಿ ಓದುವ ಕೌಶಲ.

2) ಧ್ವನಿ ಕೌಶಲಗಳು: ಸ್ಪಷ್ಟ ಉಚ್ಚಾರ ಕೌಶಲ, ವಾಕ್ಯ ಸಂಯೋಜಿಸುವ ಓದುವ ಕೌಶಲ, ಧ್ವನಿ ಏರಿಳಿತ, ನಿರರ್ಗಳತೆ ಓದುವ ಕೌಶಲ.

3) ಚಾಕ್ಷುಷ ಕೌಶಲಗಳು: ಅಕ್ಷರ, ಪದಗಳನ್ನು ಗುರುತಿಸುವ ಕೌಶಲ, ಕಣ್ಚಲನೆ ಕೌಶಲ, ಕಣ್ಣಿಂದ ಪದ, ವಾಕ್ಯ ಸ್ಥಿರೀಕರಣ / Eye Fixation

4) ಮಾನಸಿಕ ಕೌಶಲಗಳು: ಏಕಾಗ್ರತೆಯಿಂದ ಓದುವ ಕೌಶಲ, ಅಕ್ಷರ-ಪದ ಗುರುತಿಸುವ ಕೌಶಲ, ವಾಕ್ಯ ಗ್ರಹಿಕಾ ಕೌಶಲ, ಮೌನ ಓದಿನ ಕೌಶಲ, ಯೋಚಿಸುತ್ತಾ ಓದುವ ಕೌಶಲ.

5) ಶ್ರವಣ ಕೌಶಲಗಳು: ಧ್ವನಿ ಕೇಳಿಸಿಕೊಳ್ಳುತ್ತಾ ಓದುವುದು, ಉಚ್ಚಾರ ಕ್ರಮ, ಕೇಳಿಸಿಕೊಳ್ಳುತ್ತಾ ಓದುವುದು, ಧ್ವನಿ ಏರಿಳಿತಗಳನ್ನು ಕೇಳಿಸಿಕೊಳ್ಳುತ್ತಾ ಓದುವುದು.

## ಓದು ಕಲಿಸುವ ಪದ್ಧತಿಗಳು:

① ಅಕ್ಷರ ಮಾಲಾ ಪದ್ಧತಿ:

- ಇದು ಸಾಂಪ್ರದಾಯಿಕ ಪದ್ಧತಿ.
- ಇಲ್ಲಿ ವರ್ಣಮಾಲೆಯನ್ನು ಬಿಡಿಬಿಡಿಯಾಗಿ ಕಲಿಸಿ, ನಂತರ ಓದನ್ನು ಕಲಿಸಲಾಗುವುದು
- ವರ್ಣಗಳನ್ನು ಬರೆದು ಪ್ರತ್ಯೇಕವಾಗಿ ಅದ್ದಿಸಿ ಓದುವುದನ್ನು ಕಲಿಸುವುದು.
- ಇಲ್ಲಿ ಪ್ರತಿ ಅಕ್ಷರದ ರಚನೆ, ವಿನ್ಯಾಸ, ಬರೆಯುವ ಕ್ರಮ, ಧ್ವನಿ, ಉಚ್ಚಾರಕ್ರಮ ತಿಳಿಸಲಾಗುವುದು.
- ಕನ್ನಡ ಭಾಷೆ ಧ್ವನ್ಯಾತ್ಮಕ ಭಾಷೆಯಾಗಿದ್ದು, ಪ್ರತಿಯೊಂದು ಅಕ್ಷರಕ್ಕೂ ಒಂದು ಪ್ರತ್ಯೇಕ ಧ್ವನಿಯಿದೆ.

* ಇದರಿಂದ ಅನುಕೂಲಗಳಿದ್ದರೂ ಪ್ರತಿ ವರ್ಣವನ್ನು ಪ್ರತ್ಯೇಕವಾಗಿ ಕಲಿಸುವುದು ಯಾಂತ್ರಿಕವಾಗುತ್ತದೆ.

→ ಪ್ರತಿ ವರ್ಣಕ್ಕೂ ಅರ್ಥ ಇರುವುದಿಲ್ಲ.

- ಅರ್ಥವಿಲ್ಲದ ಅಕ್ಷರ ನೆನಪಿನಲ್ಲಿ ಉಳಿಯುವುದಿಲ್ಲ

- ಮನಶ್ಶಾಸ್ತ್ರಜ್ಞರ ಪ್ರಕಾರ- ಮಕ್ಕಳು ಒಂದು ಪೂರ್ಣ ಅರ್ಥ ಬರುವ ವಾಕ್ಯವನ್ನು ಸುಲಭವಾಗಿ ಕಲಿಯುವರು.

② ಪದಮಾಲಾ ಪದ್ಧತಿ.

- ಮಕ್ಕಳಿಗೆ ಅಕ್ಷರಗಳನ್ನು, ಅವುಗಳ ಧ್ವನಿ, ಸ್ವರಗಳನ್ನು ಪರಿಚಯಿಸುವುದರ ಬದಲಾಗಿ ಪದಗಳನ್ನು ಪದಗಳ ಉಚ್ಚಾರಣೆ & ಅರ್ಥಗಳನ್ನು ಕಲಿಸುವುದೇ ಪದಮಾಲಾ ಪದ್ಧತಿ.

- ಮೊದಲು ಸರಳ, ಸಹಜ ಪದ ಪರಿಚಯ → ಮೂಲಾಕ್ಷರಗಳ ಪದ - ಸಂಯುಕ್ತ ಪದ - ಒತ್ತಕ್ಷರಗಳುಳ್ಳ ಪದಗಳು, ಅನೇಕಾರ್ಥ ಅರ್ಥಗಳ ಪದಗಳನ್ನು ಪರಿಚಯಿಸಲಾಗುತ್ತದೆ.

- ಮೊದಲು ಪದ ಪರಿಚಯ ನಂತರ ವರ್ಣಗಳ ಪರಿಚಯ.

- ಈ ಪ್ರತಿಯೊಂದು ಪದದ ಅರ್ಥ, ಧ್ವನಿ, ಉಚ್ಚಾರ ಕ್ರಮವನ್ನು ಪರಿಚಯಿಸಲಾಗುತ್ತದೆ.

- ಅಕ್ಷರಮಾಲಾ ಪದ್ಧತಿಗಿಂತ ಪದಮಾಲಾ ಪದ್ಧತಿ ಪರಿಣಾಮಕಾರಿಯಾಗಿದೆ.

③ ವಾಕ್ಯಮಾಲಾ ಪದ್ಧತಿ:

- ಓದುವುದು ಎಂದರೆ ಓದಿ ಅರ್ಥ ಮಾಡಿಕೊಳ್ಳುವುದು ಎಂದೇ ಅರ್ಥ, ಅರ್ಥವೇ ಇಲ್ಲದ ಓದುಗಾರಿಕೆ ನಿರುಪಯುಕ್ತ. ಓದಿನಲ್ಲಿ ಅರ್ಥವು ಪ್ರಧಾನವಾಗಿರುವುದರಿಂದ ಓದುಗಾರಿಕೆಯನ್ನು ಅರ್ಥಪೂರ್ಣ ವಾಕ್ಯದಿಂದಲೇ ಪ್ರಾರಂಭಿಸುವುದು ಸಮಂಜಸ, ಇದೇ ವಾಕ್ಯಮಾಲಾ ಪದ್ಧತಿ.

- ಇದರಿಂದ ಉಚ್ಚಾರ & ಸ್ವರಭಾರಗಳು ಉತ್ತಮವಾಗುತ್ತವೆ.

- ವಾಕ್ಯದಲ್ಲಿ ವಿರಾಮಚಿಹ್ನೆ, ವ್ಯಾಕರಣಾಂಶ ನಿಯಮಗಳು, ಧ್ವನಿ ಏರಿಳಿತ ಭಾವಕ್ಕೆ ಅನುಸಾರವಾದ ಓದು ಇರಬೇಕು.

- ಚಿತ್ರಪಟಗಳು, ವಾಕ್ಯಗಳ ಕಾರ್ಡ್‌ಗಳನ್ನು ಬಳಸಿ ವಾಕ್ಯಮಾಲಾ ಪದ್ಧತಿಯಲ್ಲಿ ಓದು ಕಲಿಸಬೇಕು.

visit knclingarajuedu.com

- ಪದ ಮೂಲ ಪದ್ಧತಿಗಿಂತ ವಾಕ್ಯ ಮೂಲ ಪದ್ಧತಿ ಅರ್ಥಪೂರ್ಣವಾದುದು. ಸ್ವಾಭಾವಿಕ -ಭಾವಪೂರ್ಣ ಓದು ಕಲಿಯುವರು.

(4) ನೋಡಿ ಹೇಳುವ ಪದ್ಧತಿ:

- ಮಾಂಟೆಸ್ಸೋರಿ, ಫ್ರೊಬೆಲ್‌ರ ಬೋಧನಾ ಪದ್ಧತಿ, ತತ್ವಗಳನ್ನು ಆಧರಿಸಿದ ಪದ್ಧತಿಯಾಗಿದೆ.
- ಇದು ವರ್ಣಮಾಲಿಕೆ, ಕ್ರೀಡೆ, ಕುತೂಹಲಕೆರಳಿಕೆ ಹಾಗೂ ಉಪಕರಣಗಳನ್ನು ಬಣ್ಣದ ಚಾರ್ಟ್, ಚಾರ್ಟ್‌ಗಳನ್ನು ಉಪಯೋಗಿಸಿಕೊಂಡು ಓದನ್ನು ಕಲಿಸಲಾಗುವುದು. ಉದಾ: ವಾಕ್ಯಫಲಕ, ಸಚಿತ್ರ ಪುಸ್ತಕ ಬಳಕೆ.
- ಪುರಾಣ ಕಥೆಗಳನ್ನು, ಸಂಭಾಷಣೆಗಳನ್ನು ಸಚಿತ್ರ ಪುಸ್ತಕ ಅಳವಡಿಸುವುದರಿಂದ ಮಕ್ಕಳು ಚಿತ್ರಗಳನ್ನು ನೋಡುತ್ತಾ ಪೂರ್ಣ ಅರ್ಥ ಗ್ರಹಿಸುತ್ತಾ ಓದನ್ನು ಕಲಿಯುವುದು.

(5) ಕಥಾ ಪದ್ಧತಿ:

- ಕಥೆಯು ಒಂದು ಭಾವನಾರೂಪದ ಜೀವಂತ ಬರಹವಾಗಿದೆ.
- ಆಕರ್ಷಕ ಕಥೆ, ಸರಳ ಭಾಷೆ, ಪುಟ್ಟ ವಾಕ್ಯಗಳಿರುವ ಕಥೆ, ಸಂಭಾಷಣೆ ರೀತಿ, ಹೇಳುತ್ತಾ ಓದುವುದು.
- ಇದು ಅನುಕರಣಾ ರೀತಿ ಓದು. ಧ್ವನಿ ಏರಿಳಿತ, ಉಚ್ಚಾರ ಕ್ರಮ, ಸಂಗತಿ ಕೇಳುವ, ಸಚಿತ್ರ ಕಥೆ.

31/05/24

ಗಟ್ಟಿ ಓದು:

ವಾಕ್ಯಗಳನ್ನು ಗಟ್ಟಿಯಾಗಿ ಶಬ್ದಗಳೊಂದಿಗೆ ಬೇರೆಯವರಿಗೆ ಕೇಳುವಂತೆ ಓದುವುದೇ ಗಟ್ಟಿ ವಾಚನ.

* ಲಿಖಿತ (ಅ) ಮುದ್ರಿತ ಪದ & ವಾಕ್ಯಗಳನ್ನು ನೋಡುತ್ತಾ ಧ್ವನಿ ಏರಿಳಿತಗಳೊಂದಿಗೆ ಓದುವ ಕ್ರಿಯೆಯೇ ಗಟ್ಟಿ ವಾಚನ.
* ಇದು ವಾಕ್ಯಗಳ ಸುಸ್ಪಷ್ಟ ಉಚ್ಚಾರ, ನಿರರ್ಗಳತೆ & ಧ್ವನಿಯ ಏರಿಳಿತಗಳನ್ನು ಒಳಗೊಂಡಿದೆ.
* ಗಟ್ಟಿ ವಾಚನ & ಮಾತುಗಾರಿಕೆ ಕೌಶಲಗಳು ಪರಸ್ಪರ ಒಂದನ್ನೊಂದು ಬೆಸೆದಿವೆ. ಅಂದರೆ ಉತ್ತಮ ಮಾತುಗಾರಿಕೆ ಗಟ್ಟಿ ವಾಚನಕ್ಕೆ ಪೂರಕ.

* ಇದಕ್ಕೆ ಬಾಯ್ದೆರೆ ಓದು ಎನ್ನುವರು.
* ಭಾಷಾದೋಷ, ಉಚ್ಚಾರ ದೋಷ, ವೇಗತನದ ದೋಷ ತಿಳಿಯಬಹುದು.
* ಸ್ಪಷ್ಟ ಉಚ್ಚಾರ.

## ಮೌನವಾಚನ (Silent reading)

* ಪ್ರಾಚೀನ ಶಿಕ್ಷಣ
* ಮೌನ ಓದು ಎಂದರೆ ಇದೊಂದು ಮಾನಸಿಕ ಕ್ರಿಯೆಯಾಗಿರುವ ಜೊತೆಗೆ ಮನಸ್ಸಿನ ಆಲೋಚನೆಗೆ ಸಂಬಂಧಿಸಿದೆ.
* ಅಕ್ಷರಗಳನ್ನು ಮತ್ತು ಶಬ್ದ ಸಂಕೇತಗಳನ್ನು ನೋಡುತ್ತಾ ಅವುಗಳ ಅರ್ಥಗಳನ್ನು ಗ್ರಹಿಸುತ್ತಾ ಸದ್ದಿಲ್ಲದೇ ಮನಸ್ಸಿನಲ್ಲಿ ಓದುವುದೇ ಮೌನವಾಚನ.
* ಇಲ್ಲಿ ಅರ್ಥ ಗ್ರಹಿಕೆ, ಪದಸಂಯೋಜನೆ ಮತ್ತು ವಾಕ್ಯಗಳ ಅರ್ಥಗ್ರಹಿಕೆಯನ್ನು ನಿಶ್ಶಬ್ದವಾಗಿ ಗ್ರಹಿಸಲಾಗುತ್ತದೆ.
* ಉನ್ನತ ಹಂತಕ್ಕೆ ಹೋದಂತೆಲ್ಲಾ ಮೌನ ಓದು ಉಪಯೋಗವಾಗುವುದು.
* ಇಲ್ಲಿ ಅನುಕ್ರಮವಾಗಿ ಶುದ್ಧವಾಚನಗಾಗಿ, ಶಿಷ್ಟವಾದ ಬಾಯ್ದೆರೆ (ಗಟ್ಟಿವಾಚನ) ನಂತರ ಮೌನವಾಗಿ ಓದಿ ಅರ್ಥೈಸುವುದೇ ಹೆಚ್ಚು.
* ಸ್ವಯಂ ಅಧ್ಯಯನಕ್ಕೆ ಪೂರಕವಾಗಿದೆ.
* ಆಳವಾದ ಅಧ್ಯಯನಕ್ಕೆ ಪ್ರೇರಕ.
* ವಿರಾಮ ಕಾಲದಲ್ಲಿ ಓದುವುದು ಹೆಚ್ಚು.

### ಮೌನ ಓದಿನ ಪ್ರಕಾರಗಳು:

1) ಆಳವಾಚನ (Intensive)
2) ವಿಸ್ತಾರವಾದ ವಾಚನ (Extensive)
3) ಸ್ಥೂಲವಾಚನ (Skimming)
4) ಸೂಕ್ಷ್ಮ ವಾಚನ (Scanning)
5) ಶೀಘ್ರವಾಚನ (Rapid)
6) ವಿಮರ್ಶಾತ್ಮಕ ವಾಚನ.
7) ಸೃಜನಶೀಲ ವಾಚನ (Creative)

1) ಆಳವಾದ ವಾಚನ:

* ಕೌಶಲಹಂತಕ್ಕೆ ಅನ್ವಯಿಸುವುದಿಲ್ಲ.
* ವಿಷಯ ಗ್ರಹಿಕೆಗೆ ಯಶಸ್ವಿ ಸಾಧನ.
* ಓದುವ ವಿಷಯವನ್ನು ಕೇವಲ ಅರ್ಥ ಗ್ರಹಿಕೆಯಿಂದ ಓದದೇ ಆ ವಿಷಯದಲ್ಲಿನ ಪ್ರತಿಯೊಂದು ಪದ, ಅರ್ಥ, ಭಾವನೆ, ವ್ಯಾಕರಣ ಅಂಶಗಳು ಇತ್ಯಾದಿ ವಿವರಗಳನ್ನು ಗಮನಿಸಿ ಓದುವುದೇ ಆಳ ಓದು.
* ತಲಸ್ಪರ್ಶಿ ಓದು
* ವಿವರಣೆ & ಪ್ರತಿಪಾದನೆ ವಿಮರ್ಶಾತ್ಮಕವಾಗಿರುತ್ತದೆ.
* ಆಳ ಓದು ಇನ್ನೊಂದು ಅರ್ಥದಲ್ಲಿ ವಿಮರ್ಶಾತ್ಮಕ ಓದಾಗಿದೆ.
* ಮಕ್ಕಳ ಚಿಂತನೆ ಹೆಚ್ಚಿಸುತ್ತದೆ.
* ಶೋಧನಹಂತಕ್ಕೆ ಸೂಕ್ತ

Ex: ಪ್ರಯೋಗ, ಪ್ರತಿ ಜಾಗರೂಕ ಚಿತ್ರ ಓದು.

2) ವಿಶಾಲವಾದ ಓದು:

* ವ್ಯಾಪಕ ಓದು / ಪೂರಕ ಓದು / ವಿಸ್ತರಣಾ ಓದು.
* ಓದುವ ವಿಷಯದಲ್ಲಿ, ವಿಷಯದ ತಾತ್ಪರ್ಯ, ಮುಖ್ಯಾಂಶಗಳು & ಮುಖ್ಯ ಭಾವನೆಗಳನ್ನು ಗ್ರಹಿಸಿ ಓದುವುದು.
* ವಿಷಯ ಸಂಗ್ರಹದ ಓದು.
* ಇಲ್ಲಿ ಮೌನ ಓದು ಹೆಚ್ಚು ಪ್ರಧಾನ.
* ಪೂರಕ ಗ್ರಂಥಗಳಿಂದ ವಿಶಾಲ ಓದು ನೆರವೇರುತ್ತದೆ.

Ex: ದಿನಪತ್ರಿಕೆಗಳು, ಪತ್ರಿಕೆ, ನಿಯತಕಾಲಿಕೆ, ಆಧಾರ ಗ್ರಂಥ, ಪೂರಕ ಗ್ರಂಥಗಳ ಓದು

* ಈ ಓದನ್ನು ಆತ್ಮಸಂತೋಷಕ್ಕಾಗಿನ ಓದು ಎನ್ನುವರು.
* ನಿರಂತರ ಹವ್ಯಾಸವಾಗಿರುತ್ತದೆ.

3) ಸ್ಥೂಲ ವಾಚನ:

* ವಿಹಂಗಾವಲೋಕನ, ಪೂರ್ವಾವಲೋಕನ, ಪುನರಾವಲೋಕನ

* ಓದಿನ ಲೇಖನದಲ್ಲಿರುವ ಮುಖ್ಯಾಂಶಗಳನ್ನು, ಸಾಮಾನ್ಯ ಭಾವನೆಗಳನ್ನು, ಮುಖ್ಯ ಸಂದೇಶಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಮಾತ್ರ ಮೌನವಾಗಿ ಅಥವಾ ಶೀಘ್ರವಾಗಿ ಓದುವುದೇ ಸ್ಥೂಲ ಓದು.

* ಇಲ್ಲಿ ವಿವರಣಾತ್ಮಕ ಓದದೇ, ಲೇಖನದ ವಿಷಯ ಸೂಚಿ, ಶೀರ್ಷಿಕೆ, ಉಪಶೀರ್ಷಿಕೆಗಳು, ಮುಖ್ಯಾಂಶಗಳು, ಕೋಷ್ಟಕ ಹಾಗೂ ಅಂಕಿ ಅಂಶಗಳು, ~~ಕೋಷ್ಟಕಗಳು~~ ಮತ್ತು ಸಾರಾಂಶ ರೂಪದ ಓದು.

* ಇಲ್ಲಿ ಸಾರಾಂಶವನ್ನು ಗ್ರಹಿಸಲಾಗುತ್ತದೆ.

* ಇಲ್ಲಿ ಓದು ಪುಟ ಅಥವಾ ಇಡೀ ಲೇಖನವನ್ನು ವಿಹಂಗಾವಲೋಕನ ಮಾಡುವ ರೀತಿ ಓದಾಗಿರುತ್ತದೆ.

* ~~ಪ್ರತಿ~~ ಪುಟ ಒಂದು ಪುಟದಲ್ಲಿನ ವಿವಿಧ ವಾಕ್ಯಗಳ ಪ್ರಾರಂಭ ಮತ್ತು ಕೊನೆಯ ಸಾಲುಗಳನ್ನು ಓದಿ ಮುಖ್ಯಾಂಶ ಸಂಗ್ರಹಿಸಲಾಗುತ್ತದೆ.
* ಮಾನಸಿಕ ಏಕಾಗ್ರತೆ ಮತ್ತು ಸಾರಸಂಗ್ರಹಣೆ ಗ್ರಹಿಕೆ ಮುಖ್ಯ.
* ಉದ್ದೇಶ- ಕಡಿಮೆ ಕಾಲಾವಧಿಯಲ್ಲಿ ಹೆಚ್ಚು ಪುಸ್ತಕ ಓದುವುದು.

4) ಸೂಕ್ಷ್ಮ ವಾಚನ:

* ವಿಷಯವನ್ನು ವಿವರವಾಗಿ ಓದದೇ ಬೇಕಾದ ಅರ್ಥವನ್ನು ಹುಡುಕದೇ ಒಂದು ನಿರ್ದಿಷ್ಟ ಅಂಶ ಅಥವಾ ಒಂದು ಪ್ರಶ್ನೆಗೆ ಉತ್ತರ ಹುಡುಕುವ ಉದ್ದೇಶದಿಂದ ಮಾತ್ರ ಸೂಕ್ಷ್ಮವಾಗಿ ಓದಿ ಗ್ರಹಿಸುವುದೇ ಸೂಕ್ಷ್ಮವಾಚನ.

* Ex: ಲೇಖನದಲ್ಲಿ ನಿರ್ದಿಷ್ಟ ಅಂಶ ಹುಡುಕುವುದು

* ಅಂತ್ಯ ಪದದಿಂ ಓದು.

* ಅಪ್ಪಟ್ಯಾನ ರೀತಿ ಓದು

ಪದಗಳ ಪಟ್ಟಿ → ಟೆಲಿಫೋನ್ ನಂ

5) ಕ್ಷಿಪ್ರವಾಚನ :

* ಪಠ್ಯವನ್ನು ವೇಗವಾಗಿ ಓದುತ್ತಾ ಅದೇ ವೇಗದಲ್ಲಿ ಅರ್ಥ ಮಾಡಿಕೊಳ್ಳುವುದು
* ಕಡಿಮೆ ಸಮಯದಲ್ಲಿ ಹೆಚ್ಚು ವಿಷಯ ಓದಿ ಅರ್ಥಮಾಡಿಕೊಳ್ಳುವುದು
* ಸಮಯದ ಸದ್ಬಳಕೆ
* ವೇಗ ಅರ್ಥಗ್ರಹಿಕೆ.
* ಜ್ಞಾನಾರ್ಜನೆ
* ಸಮಕಾಲೀನ ಜಗತ್ತಿಗೆ ನಿರಂತರತೆ
* ಸಂಪರ್ಕ ಇಟ್ಟುಕೊಳ್ಳಲು ಸಹಾಯಕ.
* ತರಬೇತಿ & ಅಭ್ಯಾಸ ಅಗತ್ಯ.
* ಇದನ್ನು ನಿರ್ವಹಿಸಲು ಮಾನಸಿಕ ಸಿದ್ಧತೆ, ನಿರ್ದಿಷ್ಟ ಉದ್ದೇಶ, ಆತ್ಮವಿಶ್ವಾಸ, ಅರ್ಥಗ್ರಹಿಕೆ, ಏಕಾಗ್ರತೆ, ಒಂದೇ ಸಲಕ್ಕೆ ಹೆಚ್ಚು ಪದಗಳನ್ನು ಓದಿ ಗ್ರಹಿಸುವುದು
* ಓದುಗರು ಕಲಿಕಾ ತಂತ್ರಗಳಿಂದ ಪ್ರೇರಿತರಾಗಿರಬೇಕು.

6) ವಿಮರ್ಶಾತ್ಮಕ ಓದು:

* ಇದು ಮಾಹಿತಿಗಾಗಿ ಓದದೇ ವಿಮರ್ಶಾತ್ಮಕ ದೃಷ್ಟಿಯಿಂದ ಓದುತ್ತಾ ವಿಷಯಗಳನ್ನು ತಲಸ್ಪರ್ಶಿಯಾಗಿ ಗ್ರಹಿಸುತ್ತಾ, ವಿಮರ್ಶಿಸುತ್ತಾ, ಅರ್ಥೈಸುತ್ತಾ, ಮೌಲ್ಯೀಕರಿಸುತ್ತಾ ಓದುವುದೇ ವಿಮರ್ಶಾತ್ಮಕ ವಾಚನವಾಗಿದೆ.
* ಇದು ಪ್ರಜ್ಞಾಪೂರ್ವಕ, ಪ್ರಬುದ್ಧ ಮಾನಸಿಕ ಕ್ರಿಯೆಯಾಗಿದೆ.
* ಇದಕ್ಕೆ ಅತ್ಯುತ್ತಮ ಮಾನಸಿಕ ಸಾಮರ್ಥ್ಯ & ವಿಷಯ ಪರಿಣತಿ ಬೇಕು.
* ಇದು ಸತ್ಯಾಸತ್ಯತೆಯ ಪರಿಶೀಲನೆ ಓದು.
* ವಿಜ್ಞಾನಿಗಳು, ಶಿಕ್ಷಕರು, ಸಾಹಿತಿಗಳು ತತ್ವಜ್ಞಾನಿಗಳು, ವಿಮರ್ಶಾತ್ಮಕ ವಿದ್ವಾಂಸರು ಈ ಮಾದರಿಯಲ್ಲಿ ಓದುತ್ತಾರೆ.
* ಇದನ್ನು ಮಕ್ಕಳಿಗೆ ಹಂತ ಹಂತವಾಗಿ ರೂಢಿಸಬೇಕು.
* ತಾರ್ಕಿಕ ಶಕ್ತಿ ಹೆಚ್ಚಿರುವ ವಿದ್ಯಾರ್ಥಿಗಳಿಗೆ ಈ ಓದು ಅನುಸರಿಸಬೇಕು.

7) ಸೃಜನಶೀಲತೆ ಓದು;

* ಓದುಗರ ಓದಿನ ಪ್ರಬುದ್ಧ ಚಿಂತನೆಯ ಓದು, ಸೃಜನಶೀಲತೆ ಓದು.
* ಓದುಗನು ತನ್ನ ಓದಿ ವಿಷಯಗಳಲ್ಲಿ ಅಡಗಿರುವ ಅಂತಃಸತ್ವಗಳನ್ನು ಸೃಷ್ಟಿಸುತ್ತಾನೆ
* ಅನ್ವೇಷಣಾ ಪ್ರವೃತ್ತಿಯು ಹೊಸತನದ ಸೃಷ್ಟಿ ಓದಾಗಿದೆ.
* ಇದು ಹೆಚ್ಚು ಉತ್ಕೃಷ್ಟ ಅರ್ಥಗಳನ್ನು ಹೊಳೆಯಿಸುವುದಾಗಿದೆ
* ವಿಷಯಗಳನ್ನು ಕಲಾತ್ಮಕವಾಗಿ ಅರ್ಥೈಸುವ ಮೂಲಕ ನೂತನ ರೂಪಗಳನ್ನು ಸೃಷ್ಟಿಸುವುದಾಗಿದೆ

## ಕನ್ನಡ ಭಾಷಾ ಬೋಧಕನ ಅರ್ಹತೆಗಳು

[ ಶೈಕ್ಷಣಿಕ, ಸಾಮರ್ಥ್ಯ & ವೃತ್ತಿ ಅರ್ಹತೆಗಳು]

ಅರ್ಹತೆಗಳು ಶೈಕ್ಷಣಿಕ ಪದವಿ & ವೃತ್ತಿಪರ ಅರ್ಹತೆಗಳು

1) ಪದವಿ ಹಂತದಲ್ಲಿ ಕನ್ನಡವನ್ನು ಕಡ್ಡಾಯ ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು
2) ಕನ್ನಡ ವಿಷಯದಲ್ಲಿ ಅಪಾರವಾದ ಜ್ಞಾನ ಹೊಂದಿರಬೇಕು
3) ಬೋಧನಾ ಪದ್ಧತಿ ಹಾಗೂ ಬೋಧನಾ ಉಪಕರಣಗಳ ಬಗ್ಗೆ ಚೆನ್ನಾಗಿ ಅರಿತಿರಬೇಕು

ಶೈಕ್ಷಣಿಕ ಪ್ರಾವೀಣ್ಯತೆ

1) ಕನ್ನಡ ಭಾಷೆಯ ಸ್ವರೂಪವನ್ನು ಕುರಿತ ಆಳವಾದ ಪರಿಜ್ಞಾನ ಹೊಂದಿರಬೇಕು
2) ಸಾಹಿತ್ಯ ಯುಗದ ಪರಿಚಯ.

ಗುಣಗಳು / ಸಾಮರ್ಥ್ಯಗಳು / ಅರ್ಹತೆಗಳು,

① ಪ್ರಗತಿಪರ ಚಿಂತನಾ ಮನೋಭಾವ
② ಹಿತವಾದ ಮಾತುಗಾರಿಕೆ
③ ಭಾಷಾ ಪ್ರೇಮ
④ ಸಾಹಿತ್ಯ ಪ್ರೇಮ
⑤ ಸಂಗೀತ ಪ್ರೇಮ
⑥ ದೇಶ ಪ್ರೇಮ

## ವೈಯಕ್ತಿಕ ಸಾಮರ್ಥ್ಯಗಳು

1. ಪ್ರಯೋಗಶೀಲತೆ
2. ಸೃಜನಶೀಲತೆ
3. ದೂರದೃಷ್ಟಿ
4. ಉತ್ತಮ ಶಬ್ದ ಭಂಡಾರ
5. ನಾಯಕತ್ವ
6. ಅಭಿನಯ.

## ವೃತ್ತಿಪರ ಸಾಮರ್ಥ್ಯಗಳು:

1) ಭಾಷೆ ಹಾಗೂ ಸಾಹಿತ್ಯವನ್ನು ಕಲಿಸುವ ವಿವಿಧ ವಿಧಾನಗಳ ಮೇಲಿನ ಪ್ರಭುತ್ವ.
2) ಸೇವಾಂತರ್ಗತ ತರಬೇತಿ.
3) ವೃತ್ತಿಪರ ಬೆಳವಣಿಗೆ
4) ತಾಂತ್ರಿಕ ಚಟುವಟಿಕೆ.
5) ದೂರದರ್ಶನ ಹಾಗೂ ರೇಡಿಯೋ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ.
6) ಸೃಜನಶೀಲತೆಗೆ ಪ್ರೋತ್ಸಾಹ.
7) ಮೌಲ್ಯಮಾಪನದ ಬಗ್ಗೆ ತಿಳುವಳಿಕೆ.
8) ಇತರ ಶಿಕ್ಷಕರೊಡನೆ ಅನ್ಯೋನ್ಯ ಸಂಬಂಧ.

## ಕನ್ನಡ ಭಾಷಾ ಶಿಕ್ಷಕನ ಸಾಮಾನ್ಯ ಅರ್ಹತೆಗಳು / ಸಾಮರ್ಥ್ಯಗಳು:

1) ಕಲ್ಪನಾ ಶಕ್ತಿ, ಭಾಷಾ ಅಭಿಮಾನ, ಭಾಷಾ ಸಾಮರ್ಥ್ಯ ಹೊಂದಿರಬೇಕು.
2) ಬೋಧನೆಯ ಧ್ಯೇಯೋದ್ದೇಶಗಳ ಮೌಲ್ಯಗಳ ಬಗ್ಗೆ ಜ್ಞಾನ ಹೊಂದಿರಬೇಕು.
3) ಮನೋವಿಜ್ಞಾನದ ವಿಷಯದ ಅರಿವು ಇರಬೇಕು.
4) ಶಿಕ್ಷಕರು ಮಧುರ ಹಾಗೂ ಸ್ಪಷ್ಟವಾದ ಧ್ವನಿ ಹೊಂದಿರಬೇಕು.
5) ಶಿಕ್ಷಕನು ಭಾಷೆಯ ಮೇಲೆ ಹಿಡಿತ ಸಾಧಿಸಿರಬೇಕು.
6) ಶಿಕ್ಷಕನು ತಾಳ್ಮೆ & ಸಂಯಮಗುಣ ಹೊಂದಿರಬೇಕು.
7) ಶಿಕ್ಷಕನು ನೈತಿಕ ಹಾಗೂ ಶೈಕ್ಷಣಿಕ ಮೌಲ್ಯಗಳನ್ನು ಅಳವಡಿಸಿರಬೇಕು.
8) ಶಿಕ್ಷಕನು ಸ್ನೇಹಶೀಲ ಆಗಿರಬೇಕು ಹಾಗೂ ಹಾಸ್ಯ ಪ್ರವೃತ್ತಿ ಹೊಂದಿರಬೇಕು.

## ನೆನಪಿನಲ್ಲಿಡಬೇಕಾದ ಅಂಶಗಳು:

1) ಶಿಕ್ಷಕರಿಂದಲೇ ಶಿಕ್ಷಣದ ಪ್ರಗತಿ ಸಾಧ್ಯ

2) ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಬೆಳವಣಿಗೆಯಲ್ಲಿ ಭಾಷಾ ಶಿಕ್ಷಕರ ಪಾತ್ರ ಬಹಳ ಮುಖ್ಯವಾದುದು.

3) ಮಾತೃಭಾಷಾ ಬೋಧನೆಯನ್ನು ಸಮರ್ಥವಾಗಿ ನಿರ್ವಹಿಸಲು ಶಿಕ್ಷಕರು ಉನ್ನತ ಶೈಕ್ಷಣಿಕ ಸಾಮರ್ಥ್ಯ, ವೃತ್ತಿಪರ ಸಾಮರ್ಥ್ಯಗಳ ಜೊತೆಗೆ ವಿಶಿಷ್ಟ ಅರ್ಹತೆಗಳನ್ನು ಹೊಂದಿರಬೇಕು.

4) ಕನ್ನಡ ಭಾಷೆಯಲ್ಲಿ ಉತ್ಸಾಹ, ಆಳವಾದ ಆಸಕ್ತಿ, ಸಾಹಿತ್ಯಾಭಿರುಚಿ & ಮಕ್ಕಳ ಬಗ್ಗೆ ಒಲವು, ಸಹಾನುಭೂತಿ ಇರಬೇಕು.

5) ಬೋಧನಾ ಸಾಮರ್ಥ್ಯವೂ ಇರಬೇಕು.

6) ~~ಈ~~ ಬೋಧನಾ ಸಲಕರಣೆಗಳು, ಸಮೂಹ ಮಾಧ್ಯಮ ಸಂಪರ, ಸಾಮಾಜಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಸಾಮರ್ಥ್ಯವಿರಬೇಕು

7) ಶಾಲೆಯಲ್ಲಿ ಇತರ ಶಿಕ್ಷಕರೊಡನೆ, ಪೋಷಕರೊಡನೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು & ಭಾಷಾ ಬೋಧನೆಗೆ ಸಹಾಯಕವಾಗುವ ಸಂಸ್ಥೆ, ಸಂಸ್ಥೆಗಳೊಡನೆ ಉತ್ತಮ ಸಂಪರ್ಕ ಇಟ್ಟುಕೊಂಡಿರಬೇಕು.

8) ಮೌಲ್ಯಮಾಪನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರಬೇಕು

9) ರಾಷ್ಟ್ರಪ್ರೇಮ, ಪ್ರಗತಿಪರ ಮನೋಭಾವ, ವೈಜ್ಞಾನಿಕ ದೃಷ್ಟಿ, ದೂರದೃಷ್ಟಿ, ಹಾಗೂ ಅಲಿಪ್ತ ಮನೋಭಾವವುಳ್ಳವರಾಗಿರಬೇಕು.

## ಪ್ರಾಯೋಗಿಕ / ಕ್ರಿಯಾತ್ಮಕ ವ್ಯಾಕರಣ

* ಇದು ಆಧುನಿಕ ಭಾಷಾತಜ್ಞರ ಕೊಡುಗೆಯಾಗಿದೆ.

* ವ್ಯಾಕರಣವನ್ನು ಪ್ರತ್ಯೇಕವಾಗಿ ಬೋಧನೆ ಮಾಡದೆ ತರಗತಿಯ ಭಾಷಾ ಬೋಧನೆಯ ಸಂದರ್ಭದಲ್ಲಿ ವ್ಯಾಕರಣವನ್ನು ಕಲಿಸುವುದೇ ಪ್ರಾಯೋಗಿಕ ವ್ಯಾಕರಣ ಬೋಧನಾ ಪದ್ಧತಿಯಾಗಿದೆ.

* ಪಾಠ ಬೋಧನೆಯ ಜೊತೆ ಜೊತೆಗೆ ವ್ಯಾಕರಣದಲ್ಲಿ ಬರುವ ನಾಮ, ಧಾತು, ಪ್ರತ್ಯಯ, ಲಿಂಗ, ವಚನ, ಸಂಧಿ, ಸಮಾಸ, ಅವ್ಯಯ ಮುಂತಾದವುಗಳ ಕುರಿತು ವಿವರಣೆ ನೀಡುವುದು.

### ಅನುಕೂಲಗಳು :

1) ಭಾಷಾ ಕಲಿಕೆಯೊಂದಿಗೆ ವ್ಯಾಕರಣ ಬೋಧನೆಯು ಕಷ್ಟ ಎನಿಸುವುದಿಲ್ಲ.
2) ವಿದ್ಯಾರ್ಥಿಗಳು ಭಾಷೆಯೊಂದಿಗೆ ವ್ಯಾಕರಣದ ಅಂಶಗಳನ್ನು ಸುಲಭವಾಗಿ ಕಲಿಯಲು ಸಹಾಯಕವಾಗಿದೆ.
3) ವ್ಯಾಕರಣದ ಅಂಶಗಳನ್ನು ಸಹಜವಾಗಿ ಕಲಿಯುತ್ತಾರೆ.
4) ಈ ವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಇರುವುದು.

### ಅನಾನುಕೂಲಗಳು:

1) ವ್ಯಾಕರಣವನ್ನು ಕ್ರಮಬದ್ಧವಾಗಿ, ಕರಾರುವಕ್ಕಾಗಿ ಕಲಿಯಲು ಸಾಧ್ಯವಿಲ್ಲ.
2) ಇದರಲ್ಲಿ ಹೆಚ್ಚಿನ ಜ್ಞಾನಕ್ಕೆ ಅವಕಾಶವಿಲ್ಲ.
3) ವ್ಯಾಕರಣದ ನಿಯಮಗಳನ್ನು ಸ್ಪಷ್ಟವಾಗಿ ಕಲಿಸುವುದಕ್ಕೆ ಸಾಧ್ಯವಿಲ್ಲ.
4) ಇದು ಬೋಧನೆಯಲ್ಲಿ ಅಡಚಣೆಯನ್ನುಂಟು ಮಾಡುವುದು.

### ಸಾಂಪ್ರದಾಯಿಕ ಹಾಗೂ ಪ್ರಾಯೋಗಿಕ ವ್ಯಾಕರಣ ಪದ್ಧತಿ ನಡುವಿನ ವ್ಯತ್ಯಾಸ

| ಸಾಂಪ್ರದಾಯಿಕ ವ್ಯಾಕರಣ | ಪ್ರಾಯೋಗಿಕ / ಕ್ರಿಯಾತ್ಮಕ ವ್ಯಾಕರಣ |
|---|---|
| 1) ಇದು ಶಾಸ್ತ್ರೀಯ ವ್ಯಾಕರಣದ ಬೋಧನಾ ಪದ್ಧತಿಯಾಗಿದೆ. | 1) ಇದು ಕ್ರಿಯಾತ್ಮಕ, ಕ್ರಿಯಾಶೀಲ ವ್ಯಾಕರಣ ಪದ್ಧತಿಯಾಗಿದೆ. |
| 2) ಇದು ಶಿಕ್ಷಕ ಕೇಂದ್ರಿತ ಪದ್ಧತಿಯಾಗಿದೆ. | 2) ಇದು ಮನೋಕಲ ತತ್ವ ಒಳಗೊಂಡಿದೆ |

3) ಇದು ವಿದ್ಯಾರ್ಥಿಗಳಲ್ಲಿ ತಮ್ಮ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶವಿಲ್ಲ.

4) ಇದು ವಿದ್ಯಾರ್ಥಿಗಳಲ್ಲಿ ನಿರಾಸಕ್ತಿಯನ್ನು ಉಂಟು ಮಾಡುತ್ತದೆ.

5) ಇದು ಮಾಡಿಕಲಿ ತತ್ವಕ್ಕೆ ವಿರುದ್ಧವಾಗಿದೆ.

6) ಇದು ವ್ಯಾಕರಣದ ಅಂಶಗಳನ್ನು ಮಾತ್ರ ಕಲಿಸುತ್ತದೆ.

3) ಇಲ್ಲಿ ವಿದ್ಯಾರ್ಥಿಗಳು ಕ್ರಿಯಾಶೀಲತೆಯನ್ನು ಹೊಂದಿರುತ್ತಾರೆ.

4) ಇದು ಭಾಷಾ ಕೌಶಲಗಳನ್ನು ವ್ಯಾಕರಣದ ಜೊತೆ ಜೊತೆಗೆ ಕಲಿಸಿ ಕೊಡುತ್ತದೆ.

5) ಭಾಷೆಯ ನಾಲ್ಕು ಕೌಶಲಗಳು:- ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದನ್ನು ಸಂದರ್ಭೋಚಿತವಾಗಿ ಕಲಿಸುತ್ತದೆ.

04/06/24

## ಸಂಧಿಗಳು

I. ಕನ್ನಡ ಸಂಧಿಗಳು

ಕನ್ನಡ ಸಂಧಿ / ಸ್ವರ ಸಂಧಿ {
1) ಲೋಪ
2) ಆಗಮ

ವ್ಯಂಜನ - 3) ಆದೇಶ - ವ್ಯಂಜನ ಸಂಧಿ

II ಸಂಸ್ಕೃತ ಸಂಧಿಗಳು

ಸ್ವರ ಸಂಧಿಗಳು {
1) ಸವರ್ಣದೀರ್ಘ ಸಂಧಿ
2) ಗುಣಸಂಧಿ
3) ವೃದ್ಧಿ ಸಂಧಿ
4) ಯಣ್ ಸಂಧಿ

ವ್ಯಂಜನ ಸಂಧಿಗಳು {
5) ಜಶ್ತ್ವ ಸಂಧಿ
6) ಶ್ಚುತ್ವ ಸಂಧಿ
7) ಅನುನಾಸಿಕ ಸಂಧಿ

* ವ್ಯಂಜನಕ್ಕೆ ಸ್ವರ ಸೇರಿದರೆ ಗುಣಿತಾಕ್ಷರ ಆಗುತ್ತದೆ.

ಕ್ + ಅ = ಕ
(ವ್ಯಂಜನ) (ಸ್ವರ)

* ಹ್ರಸ್ವ ಸ್ವರ ಎಂದರೆ - 1 ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.
Ex: ಅ, ಇ, ಉ ---

* ದೀರ್ಘ ಸ್ವರ ಎಂದರೆ - 2 ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು
Ex: ಆ, ಈ ---

* ಅಲ್ಪಪ್ರಾಣಾಕ್ಷರಗಳು ಎಂದರೆ ಕಡಿಮೆ ಉಸಿರಿನಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.
Ex: ಕ, ಚ, ಟ, ತ, ಪ --

* ಮಹಾಪ್ರಾಣಾಕ್ಷರಗಳು ಎಂದರೆ ಹೆಚ್ಚು ಉಸಿರಿನಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು

visit knclingarajuedu.com

ಬೋಧನಾಶಾಸ್ತ್ರ

1) ಪಠ್ಯಕ್ರಮ: (Curriculum)

→ ಪಠ್ಯ ಪಠ್ಯೇತರ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ

→ ಶಾಲೆಯ ಸಮಗ್ರ ಚಟುವಟಿಕೆಯಾಗಿದೆ/ ಒಳಗೊಂಡಿದೆ.

→ ಬೋಧನಾಭ್ಯಾಸ, ಪಠ್ಯವಸ್ತು, ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಚರ್ಚೆ, ನೈತಿಕ ಶಿಕ್ಷಣ, ದೈಹಿಕ ಶಿಕ್ಷಣ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಕನ್ನಿಂಗ್ ಹ್ಯಾಮ್ ಪ್ರಕಾರ "ಪಠ್ಯಕ್ರಮವು ಕಲಾವಿದನ ಕೈಯಲ್ಲಿನ ಸಾಧನವಾಗಿದೆ".

→ ಪಠ್ಯಕ್ರಮವು ಅನುಭವಗಳನ್ನು ಒಳಗೊಂಡಿರುತ್ತದೆ.

→ ಪಠ್ಯಕ್ರಮವು ಪಠ್ಯ, ಪಠ್ಯೇತರ, ಸಹಪಠ್ಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ

2) ಪಠ್ಯಪುಸ್ತಕ (Text book):

→ ಶಿಕ್ಷಣದ ಗುರಿ ಉದ್ದೇಶಗಳ ಅನುಸಾರವಾಗಿ ಅಭ್ಯಾಸ ಕ್ರಮವಿರುವ ಪಠ್ಯವಸ್ತು.

→

## ಪಠ್ಯಪುಸ್ತಕದ ಮಹತ್ವ:

1) ಉದ್ದೇಶಗಳನ್ನು ಕ್ರಮಬದ್ಧವಾಗಿ ಕಲಿಸಲು ಸಹಾಯಕ

Date :..................

2) ~~ಭಾಷಾಸಾಮರ್ಥ್ಯ & ಸಾಹಿತ್ಯಾಭಿರುಚಿ ಬೆಳೆಸಲು ಸಹಾಯಕ~~

3) ಭಾಷಾಬೋಧಕನ ಸ್ವತಂತ್ರ ಸಂಪನ್ಮೂಲವು ಭಾಷಾ ಪಠ್ಯಪುಸ್ತಕ.

3) ಭಾಷಾ ಪಠ್ಯಪುಸ್ತಕ ಮೂಲಕ ಇತರ ಉದ್ದೇಶಗಳ ಸಾಧ್ಯವಾಗಿದೆ.

4) ಭಾಷಾ ಕೌಶಲ್ಯಗಳನ್ನು ಬೆಳೆಸುತ್ತದೆ.

5) ರಾಷ್ಟ್ರೀಯ ಏಕತೆಯನ್ನು ರೂಢಿಸುತ್ತದೆ.

6) ಇದು ಓದು & ಬರಹಕ್ಕೆ ಅವಕಾಶ ಮಾಡುತ್ತದೆ.

7) ಇದು ಕಲ್ಪನಾ ಶಕ್ತಿಯನ್ನು ಬೆಳೆಸುತ್ತದೆ.

8) ಇದು ಉಚ್ಚಾರ, ಅರ್ಥಗ್ರಹಣ, ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಲು ಅತ್ಯುತ್ತಮ ಸಾಧನ.

9) ಇದು ಮುದ್ರಿತ ಸಂಪನ್ಮೂಲ.

10) ಭಾಷಾಬೋಧನೆಯ ಅನಿವಾರ್ಯ ಕಲಿಕೋಪಕರಣ.

11) ವಿಷಯ ವಸ್ತು ಘಟಕಗಳನ್ನು ಕ್ರಮಬದ್ಧವಾಗಿ ಜೋಡಿಸಿದ ಹಾಗೂ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿರುವ ಪುಸ್ತಕಗಳೇ ಪಠ್ಯಪುಸ್ತಕ

12) ಇದು ಭಾಷಾ ಸಂಪ್ರದಾಯಗಳ ಉದ್ದೇಶಗಳನ್ನು ತಿಳಿಸುತ್ತದೆ (ಬೋಧಕನ ಕೈಪಿಡಿ)

## ರಚನಾ ತತ್ವಗಳು:

1) ಭಾಷೆಯ ತತ್ವ
2) ಶಿಶುಕೇಂದ್ರಿತ ತತ್ವ
3) ಸೃಜನಶೀಲ ತತ್ವ
4) ವ್ಯಾಕರಣ ತತ್ವ
5) ಅಭ್ಯಾಸ ತತ್ವ
6) ಚಟುವಟಿಕಾ ಕೇಂದ್ರಿತ ತತ್ವ
7) ಸಾಹಿತ್ಯದ ತತ್ವ
8) ನಿರಂತರತೆ & ವೈವಿಧ್ಯತೆಯ ತತ್ವ
9) ಸಂಪ್ರದಾಯ ತತ್ವ
10) ಮನೋರಂಜನೆ ತತ್ವ
11) ಪ್ರಜಾಪ್ರಭುತ್ವ ತತ್ವ
12) ಮಾನವೀಯ ಮೌಲ್ಯಗಳ ತತ್ವ
13) ವೈಜ್ಞಾನಿಕ ದೃಷ್ಟಿಯ ತತ್ವ
14) ಮೌಲ್ಯಮಾಪನದ ತತ್ವ.

Lekhak 235

## ಸಹಪಠ್ಯಗಳು ;

### 1) ನಿಘಂಟುಗಳು (Dictionary)

* ಕಠಿಣ, ಹೊಸ, ಅಪರಿಚಿತ ಪದಗಳ ಅರ್ಥವನ್ನು ನೀಡುತ್ತದೆ.
* ದ್ವಿಭಾಷಾ ನಿಘಂಟು (ಕನ್ನಡ - ಇಂಗ್ಲೀಷ್), ತ್ರಿಭಾಷಾ ನಿಘಂಟು (ಕನ್ನಡ, ಇಂಗ್ಲೀಷ್, ಹಿಂದಿ)
* ನಿಘಂಟು ಅಕ್ಷರದ ಪ್ರಾರಂಭದಲ್ಲಿ ಶಬ್ದಗಳ ಎಲ್ಲ ಅರ್ಥಗಳನ್ನು ನೀಡುತ್ತದೆ.
* ಇದು ಮುದ್ರಿತ ಸಂಪನ್ಮೂಲ.

### 2) ವಿಶ್ವಕೋಶ (Encyclopedia)

* ವಿಶ್ವದ ಅನೇಕ ಸಂಗತಿಗಳನ್ನು, ಘಟನೆಗಳನ್ನು, ಅನುಕ್ರಮವಾಗಿ, ಕ್ರೋಢೀಕರಿಸಿ, ಚಿತ್ರ ಹಾಗೂ ವಿವರಣೆಗಳಿಂದ ಕೂಡಿದ ಅಕ್ಷರಮಾಲೆಯ ಬೃಹತ್ ಗ್ರಂಥಗಳೇ ವಿಶ್ವಕೋಶಗಳು.

⟹ ಕನ್ನಡದ ಮೊದಲ ವಿಶ್ವಕೋಶ – 'ವಿವೇಕ ಚಿಂತಾಮಣಿ" ಇದನ್ನು ನಿಜಗುಣ ಶಿವಯೋಗಿಗಳು ಬರೆದಿದ್ದಾರೆ

→ ಕಿರಿಯರ ವಿಶ್ವಕೋಶ — ಜ್ಞಾನಗಂಗೋತ್ರಿ (ಸಂಪಾದನೆ)

### 3) ಇತರ ಪುಸ್ತಕಗಳು:

* ಅಭ್ಯಾಸ ಪುಸ್ತಕ (ರೂಢಿ ಪುಸ್ತಕ, ದಿಂಡು ಪುಸ್ತಕ)
* 'ಕೈಬರಹ ಸುಧಾರಿಸಲು ಸಹಾಯಕವಾಗಿದೆ.
* ಅಭ್ಯಾಸ ಪುಸ್ತಕವು ಓದು ಬರಹವನ್ನು ಉತ್ತಮಗೊಳಿಸುತ್ತದೆ.
* ಪಠ್ಯಪುಸ್ತಕಕ್ಕೆ ಪೂರಕವಾಗಿ ಗ್ರಂಥಗಳು, ಆಧಾರ ಗ್ರಂಥಗಳು, ಪತ್ರಿಕೆಗಳು, ನಿಯತಕಾಲಿಕೆಗಳು, ಸಾಹಿತ್ಯ ಕೃತಿಗಳು ಭಾಷಾ-ಬೋಧನಾ ಸಂಪನ್ಮೂಲಗಳಾಗಿವೆ.
* ಭಾಷೆ, ಸಾಹಿತ್ಯ, ವಿಜ್ಞಾನ, ತಾಂತ್ರಿಕತೆ ಸಂಪನ್ಮೂಲಗಳು ಪುಸ್ತಕದ ಸಹಾಯಕವಾಗಿದೆ.
* ಪಠ್ಯಪುಸ್ತಕಕ್ಕೆ ಪೂರಕವಾಗುವ ಪುಸ್ತಕಗಳನ್ನು ಸಂಪನ್ಮೂಲ ಪುಸ್ತಕ ಎನ್ನುವರು.

## ಬೋಧನೋಪಕರಣಗಳು / ಬೋಧನಾ ಸಂಪನ್ಮೂಲಗಳು:

### i) ಶ್ರಾವ್ಯ ಉಪಕರಣ:

Date :..................

→ ಆಕಾಶವಾಣಿ, ರೇಡಿಯೋ, ಟೇಪ್ ರೆಕಾರ್ಡರ್, ಗ್ರಾಮಾಫೋನ್, ಧ್ವನಿ ಮುದ್ರಿತ ಸುರುಳಿ, ಧ್ವನಿವರ್ಧಕ.

* ರೇಡಿಯೋ → ಭಾಷಣಗಳು, ಶಾಲಾ ಕಾರ್ಯಕ್ರಮ, ಚಿಣ್ಣರ ಕಥೆ, ಕಥಾ ಬಳಗ, ಸಂದರ್ಶನ, ರೇಡಿಯೋ ಕಾರ್ಯಕ್ರಮ.

ಪ್ರಸಾರಕರು — ಶ್ರೋತೃಗಳು

ಭಾಷಣ — ಕೇಳುಗರು

* ಧ್ವನಿ ಸುರುಳಿ → ಉತ್ತಮ ಶ್ರಾವ್ಯ ಸಾಧನವಾಗಿದೆ.
  * ಇದರ ಬಳಕೆಯಿಂದ ಆಕಾಶವಾಣಿ ಮತ್ತು ಬಾನುಲಿಗಳಿಗೆ ಪೂರಕವಾಗಿರುತ್ತದೆ.
  * ಪ್ರಸಿದ್ಧರ ಗೀತೆ, ವಿದ್ವಾಂಸರ ಭಾಷಣ, ಹಾಡುಗಳನ್ನು ಕೇಳಲು ಸಹಕಾರಿ.
  * ಧ್ವನಿಯನ್ನು ಮುದ್ರಿಸಿ ಕೇಳಿಸಲು ಸಹಕಾರಿ.

→ ಇದು ತರಗತಿಯ ಎಲ್ಲಾ ಹಂತಗಳಲ್ಲಿ ಬಳಸಬಹುದಾದ ಕಲಿಕೋಪಕರಣವಾಗಿದೆ.

### ii) ದೃಕ್ ಉಪಕರಣ:

* ಚಿತ್ರಗಳು ಮಾಹಿತಿ, ಕಲ್ಪನೆ ಮೂಡಿಸುವ, ಪ್ರತ್ಯಕ್ಷ ಕಲಿಕೆ ಮಾಡಿಸುವ ಉಪಕರಣಗಳಾಗಿವೆ.

Ex: ಕಪ್ಪು ಹಲಗೆ, ಚಿತ್ರಪಟ, ನಕಾಶೆ, ಬುಲೆಟಿನ್ ಬೋರ್ಡ್, ಮಾದರಿ, ಪತ್ರಿಕೆ, ಪ್ರೊಜೆಕ್ಟರ್, E-mail, ಇಂಟರ್ನೆಟ್, OHP.

a) ಕಪ್ಪುಹಲಗೆ: * ಭಾಷಾ ಬೋಧಕರ ಬೋಧನೆಯ ಜೊತೆ ನಿರಂತರವಾಗಿ ನೆರವಾಗುವ ಉಪಕರಣವಾಗಿದೆ.
* ಇದು ಬೋಧಕನ ಬಲಗೈ ಇದ್ದಂತೆ.
* ಇದು ಬಹು ಉಪಯೋಗಿ ಕಲಿಕೋಪಕರಣವಾಗಿದೆ.
* ಪಾಠದ ಕಡೆ ಸೆಳೆಯುವಲ್ಲಿ ಬರವಣಿಗೆ ಸಹಾಯಕವಾಗಿದೆ.

b) ಚಿತ್ರಗಳು: * ಒಂದು ಚಿತ್ರ 10 ಸಾವಿರ ಪದಕ್ಕೆ ಸಮವಾಗಿದೆ.
* ಕುತೂಹಲ, ಕಲ್ಪನೆಗಳಂತ ನೈಜತೆಯು ಉಂಟು ಆಗುತ್ತದೆ.

Date :..................

c) ಚಿಮುಕಿಸುವ ಕಾರ್ಡ್ (ಮಿಂಚುಪಟ್ಟಿ):

* ಕತ್ತರಿಸಿದ ರಟ್ಟಿನ ಚೂರುಗಳಲ್ಲಿ ಅಕ್ಷರ, ವಾಕ್ಯ ಪ್ರದರ್ಶಿಸುವುದು / ವ್ಯಕ್ತಿಗಳ ಪ್ರದರ / ಸಂಕೇತ ಚಿಹ್ನೆಗಳನ್ನು ತೋರಿಸಲಾಗುತ್ತದೆ.

d) ಶಿರೋನ್ನತ ಪ್ರಕ್ಷೇಪಕ (OHP):

* ಇದೊಂದು ತಾಂತ್ರಿಕ ಸಾಧನವಾಗಿದೆ.
* ಕಪ್ಪು ಹಲಗೆಯ ಬದಲಾಗಿ, ಸ್ಲೈಡ್ ಬಳಕೆ, ಪಾಠದ ಮುಖ್ಯಾಂಶಗಳನ್ನು ಪಾರದರ್ಶಕ ಹಾಳೆಯಲ್ಲಿ ಸಿದ್ಧಗೊಳಿಸಿ ಪ್ರದರ್ಶಿಸಲ್ಪಡುತ್ತದೆ.

e) ಸ್ಲೈಡ್‌ಗಳು:

* ಸ್ಥಿರಚಿತ್ರಗಳು (ಪ್ಲಾಸ್ಟಿಕ್, ಅಲ್ಯುಮಿನಿಯಂ ಫಾಯಿಲ್‌ನಿಂದ ತಯಾರಿಸುವರು)
* ಇದಕ್ಕೆ ಸ್ಲೈಡ್ ಪ್ರೊಜೆಕ್ಟರ್ ಅವಶ್ಯಕ.
* ಚಿತ್ರದ ಜೊತೆಗೆ ಅಧ್ಯಯನ ವಿವರಣೆ ಇರುತ್ತದೆ.

ಭಾಷಾ ಪ್ರಯೋಗಾಲಯ:

* ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲಗಳನ್ನು ಬೆಳೆಸಲು ಆಧುನಿಕ ಉಪಕರಣಗಳಿಂದ ಕೂಡಿದ ಕೊಠಡಿಯಾಗಿದೆ.
* ಇದರ ಮೊದಲ ಸ್ಥಾಪನೆ 1940, ಅಮೇರಿಕಾದಲ್ಲಿ ಆಗಿದೆ. ನಂತರ ಭಾರತದಲ್ಲಿ 1960ರ ಸ್ಥಾಪಿಸಲಾಗಿದೆ.
* ಭಾಷಾ ಪ್ರಯೋಗಾಲಯವು ಒಂದು ಬಗೆ ಸಂಶೋಧನಾಲಯವಾಗಿದ್ದರೆ.

* ಶಿಕ್ಷಕ - ವಿದ್ಯಾರ್ಥಿಗಳಿಗಾಗಿ ಉಚ್ಚಾರ, ಸ್ವರಭಾರ, ನಾದಬದ್ಧ, ಲಯಬದ್ಧ ವಾಕ್ಯ, ವ್ಯಾಕರಣ, ಪ್ರಶ್ನೋತ್ತರ ವಿಧಾನ, ವಾಕ್ಯರಚನೆಯ ವಿಧಾನ ಮಾಡಿ. Date..............

* ಇದರಿಂದ ಕಲಿಕೆ ಸಂತೋಷದಾಯಕವಾಗುತ್ತದೆ / ಸರಳವಾಗುತ್ತದೆ.
* ರೇಡಿಯೋ, ಟೇಪ್ ರೆಕಾರ್ಡರ್, TV, computer ... ಶ್ರವ್ಯ, ದೃಶ್ಯ ಉಪಕರಣಗಳು ಬಳಕೆಯಾಗುತ್ತದೆ.
* ಭಾಷಾ ಶಿಕ್ಷಕ ಭಾಷಾ ಪ್ರಯೋಗಾಲಯದ ವ್ಯವಸ್ಥೆ, ನಿರ್ವಹಣೆ ಮಾಡುತ್ತಾನೆ.
* ಭಾಷಾ ಪ್ರಯೋಗಾಲಯದ ವಿಧಗಳು -
  i) ಬ್ರಾಡ್ ಕಾಸ್ಟಿಂಗ್ ಟೈಪ್
  ii) ಲೈಬ್ರರಿ ಟೈಪ್
  iii) ಡಯಲಿಂಗ್ (Dial type)
  ಇ) ಟೇಪುಗಳನ್ನು ವಿದ್ಯಾರ್ಥಿಗಳು ಬೇಕಿದ್ದಂತೆ ಉಪಯೋಗಿಸಲಾಗುತ್ತದೆ.
  iv) ಸಂಯೋಜಿತ ವಿಧಾನ (ಬ್ರಾಡ್ ಕಾಸ್ಟ್ ಮತ್ತು ವಿಧಾನ) + (ಲೈಬ್ರರಿ ವಿಧಾನದ ಎರಡು ಸೇರಿದ್ದು).

* ಇದು ಭಾಷಾ ಕಲಿಕೆಯ ಅತ್ಯುತ್ತಮ ಸಾಧನವಾಗಿದೆ.

ಪ್ರಯೋಜನಗಳು :-
ಸ್ವತಂತ್ರ ಓದು, ಸ್ವಯಂ ಅಧ್ಯಯನಕ್ಕೆ ಪೂರಕ ಉಚ್ಚಾರ ಕಲ್ಪಿಸುವುದೇ ಪ್ರಯೋಜನವು.

iii) ಶ್ರವ್ಯ-ದೃಶ್ಯ ಉಪಕರಣ:
* ಕೇಳುವ, ನೋಡುವ ಉಪಕರಣವಾಗಿದೆ.
* ಅನುಭವಕ್ಕೆ ಒತ್ತು ನೀಡುವ ಸಾಧನಗಳಾಗಿವೆ.
* ಸ್ಲೈಡ್ ಪ್ಲಾನ್, TV, ಸಿನೆಮಾ, ರೇಡಿಯೋ ಪಾಠ, computer, Smartphone, ಚಿತ್ರಪಟಗಳು, ರೇಡಿಯೋ ನಾಟಕಗಳು, NCERT, DSERT ರೇಡಿಯೋ ಪಾಠ, Youtube channel,
* ಈ ಉಪಕರಣಗಳು "ಕುತೂಹಲ, ಏಕಾಗ್ರತೆ, ಮನರಂಜನೆ" ಅರ್ಥ ಗ್ರಹಿಕೆಗೆ ಒತ್ತು, ಆಸಕ್ತಿ ನೀಡುತ್ತವೆ.

Lekhak 235

* ಚಿತ್ರಗಳಿಂದ ಕಾವ್ಯ 30%, ಗದ್ಯ -50% ಕಲಿಕೆ ನೆರವೇರುತ್ತದೆ.
ನಾಟಕದಿಂದ 50% ಕಲಿಕೆ ನೆರವೇರುತ್ತದೆ. Date : ..................

ಗುರಿ:

ಪದ್ಯವನ್ನು ಹಾಡಿನ ಮೂಲಕ ಕಲಿಸುತ್ತದೆ.

ಗದ್ಯಬೋಧನೆ:

* ಇದೊಂದು ಪಠ್ಯಪುಸ್ತಕದ ಭಾಗವಾಗಿದೆ.
* ಇದು ಪಠ್ಯಪುಸ್ತಕ ವಿಧಾನ & ನಾಟಕೀಕರಣ ವಿಧಾನ, ಅಭಿನಯ ವಿಧಾನವಾಗಿದೆ.

ನಾಟಕೀಕರಣ:

* ಇದು ಮಾತು, ಮುಖಭಾವ, ಚಲನವಲನಗಳನ್ನು ಒಳಗೊಂಡಿದೆ.
* ಇದು ಪ್ರತ್ಯಕ್ಷ ಪ್ರತಿನಿಧೀಕರಣವಾಗಿದೆ.
* ಇದು ಕಲಿಕೆ ಕಲೆಗೆ ವ್ಯಕ್ತಿಕ ಕಾರಣವಾಗಿದೆ.
* ಸೃಜನಶೀಲತೆಯನ್ನು ಬೆಳೆಸುತ್ತದೆ.

ಹಂತಗಳು:

- ಪೀಠಿಕೆ, ನಾಟಕದ ಆಯ್ಕೆಯ, ಪಾತ್ರ ಹಂಚಿಕೆ, ಅಭಿನಯ ತರಬೇತಿ, ನಾಟಕ ಪ್ರದರ್ಶನ, ಕ್ರಮ ಚಟುವಟಿಕೆ, ಪಠ್ಯಪುಸ್ತಕ ಚಟುವಟಿಕೆ.

ಯೋಜನಾ ಪದ್ಧತಿ:

* ಸಾಮಾಜಿಕ ಪರಿಸರದಲ್ಲಿ ಕೈಗೊಂಡ ಒಂದು ಹೃದಯಪೂರ್ವಕ & ಉದ್ದೇಶಪೂರ್ವಕ ಚಟುವಟಿಕೆಯಾಗಿದೆ - ಕಿಲ್ ಪ್ಯಾಟ್ರಿಕ್.

* ಸ್ವಾಭಾವಿಕ ಪರಿಸರದಲ್ಲಿ ಕೈಗೊಳ್ಳುವ ಸಮಸ್ಯಾತ್ಮಕ ಚಟುವಟಿಕೆ - ಸ್ಟೀವನ್ ಸನ್.

* ಶಾಲೆ ತೆರಲ್ಪಟ್ಟ ಸಮಾಜದ ಒಂದು ಭಾಗವೇ ಆಗಿದೆ
— ಬಲಾರ್ಡ್



ಮಕ್ಕಳ ಚರಿತ್ರಾ ಅಧ್ಯಯನ

ಫ್ರೋಬೆಲ್ → 1782 - 1852

* 1782 ರಲ್ಲಿ ಜರ್ಮನಿಯಲ್ಲಿ ಜನನ.
* 1872 ರಲ್ಲಿ The Education of man ಎಂಬ ಕೃತಿ ರಚಿಸಿದರು.
* 1877 ರಲ್ಲಿ ಬ್ಲಾಂಕೆನ್‌ಬರ್ಗ್‌ನಲ್ಲಿ ಕಿಂಡರ್ ಗಾರ್ಟನ್ ಸ್ಥಾಪನೆ.

ಪದ್ಯ ಬೋಧನೆ:

* ಇದು ಸೌಂದರ್ಯ ಪ್ರಜ್ಞೆ, ರಸಾಸ್ವಾದನೆ, ಲಾಲಿತ್ಯ, ಅಭಿವ್ಯಕ್ತಿಗಳು ಭಾವನೆ, ಪದ್ಯ ಪ್ರೀತಿಯನ್ನು ಬೆಳೆಸಲಾಗುತ್ತದೆ.
* ಪೀಠಿಕಾ ಕಲ್ಪನೆ, ಪದ್ಯ ಪ್ರಸ್ತುತಿ (ವಾಚನ), ಭಾವಗ್ರಹಣ, ಪದ್ಯ ಬೋಧನೆ, ಶ್ರವಣ, ಗ್ರಹಣ, ರಸಾನುಭವದಿಂದ ಸಾಗಬೇಕು. ಪದ್ಯದ ಭಾವಾನುವಾದ, ಪದ್ಯ ಕಂಠಪಾಠ.

ವ್ಯಾಕರಣ ಬೋಧನೆ:

* ಭಾಷೆಯ ರಚನೆಯ ನಿಯಮಗಳು ಹಾಗೂ ಬಳಕೆ ತಿಳಿಸುವ ಶಾಸ್ತ್ರ.
* ಭಾಷಾಶಾಸ್ತ್ರ, ಭಾಷಾ ಸಾಮರ್ಥ್ಯ ಗಳಿಕೆ,

ಕೇಶಿರಾಜ - ಅಕ್ಷರಗಳ, ಪದಗಳ, ನಿಯಮ ತಿಳಿಸುವ ವಾಕ್ಯಗಳ

1) ಸಂಪ್ರದಾಯಿಕ ವ್ಯಾಕರಣ - ವ್ಯಾಕರಣ ನಿಯಮ ಬೋಧನೆ. ಭಾಷಾ ಪ್ರಯೋಗ ಕಲಿಸುವುದು.

* ಇಲ್ಲಿ ನಿಗಮನ ಪದ್ಧತಿಯನ್ನು ಬಳಸಲಾಗುವುದು.
  → ನಿಯಮ - ಉದಾಹರಣೆ
  → ಅರಿಸ್ಟಾಟಲ್ ಪ್ರತಿಪಾದಿಸಿದ್ದಾರೆ.

* ಅನುಗಮನ ಪದ್ಧತಿ (ಫ್ರಾನ್ಸಿಸ್ ಬೇಕನ್).
  → ಉದಾಹರಣೆ - ನಿಯಮ.

Lekhak 235

→ ಸಂಪೂರ್ಣ ಪದ್ಧತಿ – ಅನುಗಮನ & ನಿಗಮನಗಳ ಸಂಶ್ಲೇಷಣೆ.

iii) ಕಾರ್ಯಾತ್ಮಕ ವ್ಯಾಕರಣ :-

Date : ..................

ಇಲ್ಲಿ ಮಾತು, ಬರಹ ಪ್ರಾಧಾನ್ಯವಾಗುತ್ತದೆ.

21/05/24

ವ್ಯಾಕರಣ

## ಅನ್ಯದೇಶ್ಯ ಪದಗಳು :-

ದೇಶ್ಯ → ಅಚ್ಚಗನ್ನಡ

ಅನ್ಯದೇಶ್ಯ → ಬೇರೆ ಭಾಷೆಯಿಂದ ಕನ್ನಡಕ್ಕೆ ಬಂದಿರುವ ಪದಗಳು.

ಆಡಳಿತ
ವ್ಯವಹಾರ
ಧಾರ್ಮಿಕ ಪ್ರಭಾವ
} ಈ ಕಾರಣಗಳಿಂದ ಕನ್ನಡಕ್ಕೆ ಅನೇಕ ಅನ್ಯದೇಶ್ಯ ಶಬ್ದಗಳು ಬಂದಿವೆ

* ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬಂದಿರುವುದು ಸಾಹಿತ್ಯದ ಪ್ರಭಾವದಿಂದ.

→ ಪೋರ್ಚುಗೀಸ್ ಪದಗಳು :-

→ ಇಸ್ತ್ರಿ, ಪಗಾರ, ಕಂಪನಿ, ಸಾಬೂನು, ಪಾದ್ರಿ, ಬಟಾಟೆ, ಪೇರಲ.

ಅರಬ್ಬೀ - ಪರ್ಷಿಯನ್ ಪದಗಳು:

ಬಜಾರ, ನಕ್ಷೆ, ದುರ್ಬೀನು, ಕಾನು, ಗಣ್ಯಾ.

① ಪರ್ಷಿಯನ್ (ಪಾರ್ಸಿ)
② ಪೋರ್ಚುಗೀಸ್
③ ಹಿಂದೂಸ್ತಾನಿ
④ ಉರ್ದು
⑤ ಇಂಗ್ಲಿಷ್